ಡಾ॥ ಎಂ. ಪಿ. ಕರ್ಕಿ.—ದೈಹಿಕ ಶಿಕ್ಷಕರ ವೇತನ ಶ್ರೇಣಿಯಲ್ಲಿ ಎರಡು ವಿಧ ಇದೆ. ಯಾವ ರೀತಿ ನೇಮಕ ಮಾಡಬೇಕೆಂಬ ವಿಚಾರವೂ ಇದೆ. 3-5 ವರ್ಗಗಳ ಸಂಖ್ಯೆ ಇದ್ದರೆ, ಬಿ.ಪಿ.ಎಡ್. ಪದವೀಧರರನ್ನು ನೇಮಕ ಮಾಡಬೇಕೆಂದು ಆದೇಶ ಕೊಟ್ಟಿದ್ದೀರಿ. ಇದರ ಬಗ್ಗೆ ಮತ್ತೆ ವಿಚಾರಣೆ ಏತಕ್ಕೆ? ತಪ್ಪು ಇದ್ದರೆ ವಿಚಾರಣೆ ಮಾಡಲಿ. ಸರಿಯಾದಂಥ ಕ್ರಮ ಸರ್ಕಾರ ತೆಗೆದುಕೊಂಡಿರುವಾಗ ವಿಚಾರಣೆ ಅಪ್ರಸ್ತುತ. ತಾವು ಬರೀ ದುಡ್ಡಿನ ವಿಷಯದಲ್ಲಿ ಯೋಚನೆ ಮಾಡಬೇಡಿ. ನ್ಯಾಯ ನಿರ್ಣಯ ಮಾಡುವಾಗ, ನ್ಯಾಯವಾದ ರೀತಿಯಲ್ಲಿ ನೇಮಕಾತಿ ಮಾಡಿದ್ದರೆ ; ವೇತನಶ್ರೇಣಿ ಕೊಡಬೇಕಾಗುತ್ತದೆ. ಇಲ್ಲದೇ ಇದ್ದರೆ ಕರ್ತವ್ಯ ಲೋಪ ಮಾಡಿದಂತಾಗುತ್ತದೆ. ವಿಚಾರಣೆಯನ್ನು ಕೈಬಿಟ್ಟು ತಾವು ನಿರ್ಣಯ ಮಾಡಬೇಕು.

ಶ್ರೀ ಬಿ. ರಾಚಯ್ಯ.—ಸ್ವಾಮಿ, ದಾಮಾಶ ಪ್ರಕಾರ ಯಾವ ಯಾವ ಶಾಲೆಗಳಲ್ಲಿ ಬಿ.ಪಿ.ಎಡ್. ಆದವರನ್ನು ಸಿ.ಪಿ.ಎಡ್. ಆದವರನ್ನು ಉಪಾಧ್ಯಾಯರನ್ನಾಗಿ ನೇಮಕ ಮಾಡಿಕೊಂಡಿದ್ದಾರೆ ಎನ್ನುವ ಬಗ್ಗೆ ವಿಚಾರಣೆ ಮಾಡಲೇಬೇಕು. ಒಂದು ಜಿಲ್ಲೆಗೆ ಕೊಟ್ಟಿದ್ದಾರೆ ; ಇನ್ನು ಎರಡು ಜಿಲ್ಲೆಗೆ ಕೊಟ್ಟಿಲ್ಲ. ದಾಮಾಷಾ ಪ್ರಕಾರ ಯಾರು ಯಾರನ್ನು ನೇಮಿಸಿಕೊಂಡಿದ್ದಾರೆ ; ಅವರಿಗೆ ವೇತನ ಕೊಡಬೇಕೆಂಬುದನ್ನು ನಾನು ಒಪ್ಪಿಕೊಂಡಿದ್ದೇನೆ.

ಶ್ರೀ ಪ್ರಭಾಕರ್ ರಾಣೆ ಎಸ್.—ವಿಚಾರಣೆಯನ್ನು ಏತಕ್ಕೆ ಮಾಡಬೇಕು ಎಂಬುದು ಅರ್ಥವಾಗುವುದಿಲ್ಲ.

ಶ್ರೀ ಬಿ. ರಾಚಯ್ಯ.—1974 ರಿಂದ ಸುಮ್ಮನೇ ಇದ್ದರೂ, ಈಗ ವಿಚಾರಣೆ ಮಾಡಿಸುತ್ತಿದ್ದೇನೆಂದರೆ ಯಾವಾಗ ಕೊಡುತ್ತೀರಿ ಎಂದು ಕೇಳುತ್ತಿದ್ದಾರೆ.

ಡಾ। ಎಂ. ಪಿ. ಕರ್ಕಿ.—ಕಳೆದ 9 ವರ್ಷಗಳಿಂದ ವಿಚಾರಣೆ ನಡೆಯುತ್ತಿದೆಯೆ ? ನಿರ್ಣಯ ಯಾವಾಗ ಮಾಡುತ್ತೀರಿ ?

ಉಪಾಧ್ಯಕ್ಷರು.—ಪ್ರಾರಂಭವಾಗಿದೆ.

ಶ್ರೀ ಪ್ರಭಾಕರ್ ರಾಣೆ ಎಸ್.—ನಿರ್ದಿಷ್ಟ ಅವಧಿಯಲ್ಲಿ ಮಾಡುತ್ತೇವೆಂದು ಹೇಳುತ್ತೀರಾ ?

ಶ್ರೀ ಬಿ. ರಾಚಯ್ಯ.—ವಿಚಾರಣೆ ಮುಗಿದ ಕೂಡಲೇ ಕೊಡುತ್ತೇವೆ.

ಉಪಾಧ್ಯಕ್ಷರು.—ಶ್ರೀ ಬಣಕಾರ್ ಗೈರು ಹಾಜರಿ.

ಶ್ರೀ ಜೆ. ಡಿ. ಸೋಮಪ್ಪ.—ಸ್ವಾಮಿ ನಾನು ಹಾಸನ ಡೈರಿ ಬಗ್ಗೆ ಸರ್ಕಾರದ ಗಮನಕ್ಕೆ ತರುವುದೇನೆಂದರೆ.....

ಉಪಾಧ್ಯಕ್ಷರು.—ಇಲ್ಲ ಇಲ್ಲ. ಅದಕ್ಕೆ ಅವಕಾಶ ಕೊಡುವುದಕ್ಕಾಗುವುದಿಲ್ಲ.

ಶಾಸನ ರಚನಾ ಕಾರ್ಯಕಲಾಪಗಳು

(i) The Karnataka Land Revenue (Amendment) Bill, 1984

Motion to consider

Sri V. L. Patil (Minister for Revenue).—I move :

"That the Karnataka Land Revenue (Amendment) Bill, 1984 be taken into consideration"

The question was proposed

ಶ್ರೀ ವಿ. ಎಲ್. ಪಾಟೀಲ್.—ಸ್ವಾಮಿ, ನಗರಗಳು ಹಾಗೂ ಪಟ್ಟಣಗಳು ವಿಪರೀತವಾಗಿ ಬೆಳೆಯುತ್ತಿವೆ ; ಅದೇ ರೀತಿ ಕೈಗಾರಿಕೆಗಳು ಬರುತ್ತಿವೆ ; ಇದರಿಂದ ಹವೆ ಕೆಟ್ಟು, ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಉಂಟು ಮಾಡುವುದನ್ನು ತಡೆಯುವ ಸಲುವಾಗಿ ನಗರದ ಸುತ್ತಲೂ ಹಸಿರು ಪಟ್ಟಿಯನ್ನು ಮಾಡಬೇಕೆಂಬ ಉದ್ದೇಶದಿಂದ ಈ ತಿದ್ದುಪಡಿ ಮಸೂದೆಯನ್ನು ತರಲಾಗಿದೆ ; ಮಾನ್ಯ ಸಭೆ ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಹೆಚ್. ಗಂಗಾಧರನ್ (ಕೃಷ್ಣರಾಜ).—ನಗರಗಳ ಸುತ್ತಲು ಹಸಿರು ಪಟ್ಟಿ ಮಾಡಬೇಕೆಂಬ ಬೇಡಿಕೆ ಬಹಳ ವರ್ಷಗಳಿಂದಲೂ ಇತ್ತು. ನಗರಗಳು ಒರೆ ಕೋರೆಯಾಗಿ ಬೆಳೆಯುವುದರಿಂದ ನಗರದಲ್ಲಿ ವಾಸ ಮಾಡತಕ್ಕ ನಾಗರೀಕರಿಗೆ ನೀರಿನ ಕೊರತೆ ; ವಿದ್ಯುಚ್ಛಕ್ತಿ ಕೊರತೆ, ವಸತಿ ಸೌಕರ್ಯಗಳ ಕೊರತೆ ಹೋಗಲಾಡಿಸುವುದು ಬಹಳ ಕಷ್ಟವಾದ ಕೆಲಸವಾಗಿದೆ. ಆದಷ್ಟು ಬೇಗ ಈ ಮಸೂದೆಯನ್ನು ಕಾರ್ಯರೂಪಕ್ಕೆ ತಂದು ; ಈ ಒಂದು ನಿರ್ದಿಷ್ಟ ಏರಿಯಾದೊಳಗೆ ಮಾತ್ರ ನಗರ ಬೆಳೆಯುವುದಕ್ಕೆ ಅವಕಾಶ ಮಾಡಬೇಕು. ಬೆಂಗಳೂರು ಮತ್ತು ಮಂಗಳೂರು ನಗರಗಳಲ್ಲಿ ದೊಡ್ಡ ಕಟ್ಟಡಗಳು ; ಹೊಸ ಕಟ್ಟಡಗಳು ಬರುವುದನ್ನು ನಿಲ್ಲಿಸಬೇಕು.

ಈ ಅರ್ಬನ್ ಡೆವಲಪ್‌ಮೆಂಟ್ ಹೋಗಿ ಇವತ್ತಿನ ದಿವಸ ಪ್ರಿವೆನ್‌ಷನ್ ಆಫ್ ಅರ್ಬನ್ ಡೆವಲಪ್‌ಮೆಂಟ್ ಆಗಬೇಕಾಗಿದೆ. ಇದು ಎಲ್ಲಾ ದೃಷ್ಟಿಯಿಂದಲೂ ಒಳ್ಳೆಯದೆಂದು ಹೇಳುವುದಕ್ಕೆ ಬಯಸುತ್ತೇನೆ. ಈಗ ತಾವು ಹಾಕಿಕೊಂಡಿರತಕ್ಕ ಯೋಜನೆ ಬಹಳ ಚೆನ್ನಾಗಿದೆ. ನೇಪಾಳದಲ್ಲಿ ಚೈನಾ ಸರ್ಕಾರದವರು ಬಂದು ಮಾಡಿಕೊಟ್ಟಿದ್ದಾರೆ. ಲಿಂಕ್‌ರೋಡ್ ಎಂದು ಮಾಡಿಸುತ್ತ ಫಾರೆಸ್ಟ್‌ನ್ನು ಬೆಳೆಸತಕ್ಕ ಕಾರ್ಯಕ್ರಮವನ್ನು ತಾವು ಮಾಡಬೇಕು. ಒಂದು ಫರ್ನಾಂಗ್ ಸುತ್ತ ಅರಣ್ಯವನ್ನು ಬೆಳೆಸುವುದಕ್ಕೆ ವ್ಯವಸ್ಥೆ ಮಾಡಬೇಕು. ಅದರಿಂದ ಆಚೆಗೆ ಏನೂ ಬರಲಿಕ್ಕೆ ಅವಕಾಶ ಇರಕೂಡದು ಎನ್ನತಕ್ಕ ಕಾನೂನು ಮಾಡಬೇಕಾದ್ದು ಅಗತ್ಯವಿದೆ. ಇವತ್ತಿನ ದಿವಸ ಎಲ್ಲಾ ಕಛೇರಿ ಕಾರ್ಖಾನೆಗಳು ಬೆಂಗಳೂರು ಪಟ್ಟಣದಲ್ಲಿಯೇ ಇರುವುದರಿಂದ, ದೂರದಲ್ಲಿರತಕ್ಕವರು ಎಲ್ಲರೂ ಇಲ್ಲಿಗೆ ಬರಬೇಕಾಗಿರುತ್ತದೆ. ಆದುದರಿಂದ ಕೆಲವು ಮುಖ್ಯ ಇಲಾಖೆಯ ಪ್ರಧಾನ ಕಛೇರಿಗಳನ್ನು ಬೇರೆ ಬೇರೆ ಜಿಲ್ಲಾ ಕೇಂದ್ರಗಳಲ್ಲಿ ಮಾಡತಕ್ಕದ್ದು ಒಳ್ಳೆಯದು. ಉದಾಹರಣೆಗೆ ಯಾವುದೋ ಒಂದು ರೆವಿನ್ಯೂ ಡಿಪಾರ್ಟ್‌ಮೆಂಟಿನ ಕೆಲಸವಿದ್ದರೆ ರಾಯಚೂರಿನಿಂದ ಬೆಂಗಳೂರಿಗೆ ಬರಬೇಕಾಗಿದೆ, ಅರಣ್ಯ ಇಲಾಖೆಯ ಕೆಲಸವಿದ್ದರೂ ಸಹ ಬೆಳಗಾಂನವರು ಬೆಂಗಳೂರಿಗೆ ಬರಬೇಕಾಗಿದೆ. ಆದುದರಿಂದ ತಾವು ಉದಾಹರಣೆಗೆ ಅರಣ್ಯ ಇಲಾಖೆಯ ಪ್ರಧಾನ ಕಛೇರಿಯನ್ನು ಒಂದುಕಡೆಯಲ್ಲಿ ಮಾಡಿ, ಮತ್ತೊಂದು ಇಲಾಖೆಯ ಪ್ರಧಾನ ಕಛೇರಿಯನ್ನು ಮತ್ತೊಂದು ಕಡೆಯಲ್ಲಿಮಾಡಿ. ಹೀಗೆ ಮಾಡುವುದರಿಂದ ಜನ ಆಯಾಯ ಪ್ರದೇಶಗಳಿಗೆ ಹೋಗಿ ಕೆಲಸ ಮಾಡಿಸಿಕೊಂಡು ಬರಲು ಅನುಕೂಲವಾಗುತ್ತದೆ. ಇಲ್ಲದಿದ್ದರೆ ಎಲ್ಲ ಕಛೇರಿಗಳು ಒಂದೇಕಡೆಯಲ್ಲಿದ್ದರೆ ಆಗ ಎಲ್ಲ ಜನಗಳೂ ಇಲ್ಲಿಗೆ ಬರುವುದರಿಂದ ಜನಸಂದಣಿ ಕೂಡ ಹೆಚ್ಚಾಗುತ್ತದೆ. ಇದರಿಂದಲೇ ಸ್ಲಂಗಳು ಕೂಡ ಜಾಸ್ತಿಯಾಗುತ್ತಿವೆ. ಕಛೇರಿ ಕಟ್ಟಡಗಳನ್ನು ಕಟ್ಟುವುದಕ್ಕಿಂತ ಮುಂಚಿತವಾಗಿ ರಷ್ಯಾ ದೇಶದಲ್ಲಿ ಏನು ಮಾಡುತ್ತಾರೆ ಎಂದರೆ ಆ ಕಟ್ಟಡವನ್ನು ಕಟ್ಟಬೇಕಾಗಿದ್ದರೆ ಎಷ್ಟುಜನ ಕೆಲಸಗಾರರು ಬೇಕಾಗಿರುತ್ತಾರೋ ಅಷ್ಟು ಜನಕ್ಕೂ ವಸತಿ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟು ಆನಂತರ ಕಟ್ಟಡದ ಕೆಲಸವನ್ನು ಪ್ರಾರಂಭ ಮಾಡುತ್ತಾರೆ. ಆದರೆ ನಮ್ಮಲ್ಲಿ ಆ ಒಂದು ವ್ಯವಸ್ಥೆ ಇಲ್ಲದೇ ಇರುವುದರಿಂದ ಇಲ್ಲಿ ಒಂದು ಕಟ್ಟಡ ಕಟ್ಟಲು ಪ್ರಾರಂಭವಾದರೆ ಅದರ ಸುತ್ತಮುತ್ತಲು ಕೊಳಚೆಪ್ರದೇಶಗಳು ಉತ್ಪತ್ತಿಯಾಗುತ್ತವೆ. ಆನಂತರ ಆ ಕಟ್ಟಡ ಕಟ್ಟಿ ಪೂರ್ತಿಯಾದರೂ ಸಹ ಆ ಕೊಳಚೆ ಪ್ರದೇಶಗಳು ಹಾಗೆಯೇ ಉಳಿದುಕೊಂಡು ಬಿಡುತ್ತವೆ. ಆದುದರಿಂದ ಮೊದಲು ತಾವು ಈ ವ್ಯವಸ್ಥೆಯನ್ನು ಬದಲಾವಣೆ ಮಾಡಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ. ಇದರಿಂದ ಗ್ರಾಮಾಂತರ ಪ್ರದೇಶಗಳ ಜನರು ಪಟ್ಟಣಗಳಿಗೆ ಬಂದು ನೆಲೆಸುವುದಕ್ಕೆ ಪ್ರಾರಂಭಮಾಡಿರುವುದರಿಂದ ಕೊಳಚೆ ಪ್ರದೇಶಗಳು ಜಾಸ್ತಿಯಾಗುತ್ತಿದೆ ಇದನ್ನು ತಾವು ಮೊದಲು ತಡೆಗಟ್ಟಿ. ಈಗ ಏನು ಗ್ರೀನ್‌ಬೆಲ್ಟ್ ಏರಿಯಾ ಎಂದು ಏನು ನಿಗದಿ ಮಾಡುತ್ತೀರಿ ಅದರೊಳಗೆ ಯಾವುದೇ ಕಟ್ಟಡ ಬರದ ಹಾಗೆ ನೋಡಿಕೊಳ್ಳಬೇಕೆಂದು ಹೇಳಿ ಈ ಮಸೂದೆಯನ್ನು ಸ್ವಾಗತಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಿ. ಧನಂಜಯ ಕುಮಾರ್.— ಮಾನ್ಯ ಉಪಾಧ್ಯಕ್ಷರೇ, ಕರ್ನಾಟಕ ಲ್ಯಾಂಡ್ ರೆವಿನ್ಯೂ ಆಕ್ಟ್‌ಗೆ ತುದಿರತಕ್ಕ ಅಮೆಂಡ್‌ಮೆಂಟ್ ನಿಜಕ್ಕೂ ಕೂಡ ಬಹಳ ಸ್ವಾಗತಾರ್ಹವಾದದ್ದು. ಇಲ್ಲಿ ಗ್ರೀನ್ ಬೆಲ್ಟ್ ಏರಿಯಾವನ್ನು ನಿಗದಿಮಾಡುವಂಥಾ ಸಂದರ್ಭದಲ್ಲಿ ತಮಗೆಲ್ಲಾ ಗೊತ್ತಿರುವ ಹಾಗೆ ಬೆಂಗಳೂರು ನಗರದಲ್ಲಿರುವ ಹಾಗೆ ಮಂಗಳೂರು ನಗರದಲ್ಲಿ ಹಾಗೂ ಮೈಸೂರು ನಗರದಲ್ಲಿ ಮತ್ತಿತರ ಕಡೆಗಳಲ್ಲಿ ಈಗಾಗಲೇ ವಸತಿಹೀನರಿಗೆ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಹೌಸಿಂಗ್ ಸೊಸೈಟಿಗಳನ್ನು ಮಾಡಿಕೊಂಡಿದ್ದಾರೆ. ಕೆಲವು ಭಾಗಗಳಲ್ಲಿ ಸೊಸೈಟಿ ಮಾಡಿಕೊಂಡು ಸ್ಕೀಂನ್ನೆಲ್ಲಾ ಮಾಡಿಕೊಂಡು ಸಂಬಂಧಪಟ್ಟ ಇಲಾಖೆಯವರ ಒಪ್ಪಿಗೆಗಾಗಿ ಅರ್ಜಿ ಹಾಕಿಕೊಂಡು ಕಾಯುತ್ತಾ ಕುಳಿತುಕೊಂಡಿದ್ದಾರೆ. ಅವುಗಳ ಬಗ್ಗೆ ತಾವು ಆದಷ್ಟು ಬೇಗ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗಿದೆ. ಗ್ರೀನ್‌ಬೆಲ್ಟ್ ಏರಿಯಾದಲ್ಲಿ ಬರತಕ್ಕವರಿಗೆ ಬೇರೆ ಜಾಗವನ್ನು ತಾವು ಒದಗಿಸಿಕೊಡಬೇಕಾಗಿದೆ ಇಲ್ಲವೆಂದರೆ, ಬೇರೆ ಪ್ರೈವೇಟ್ ಲ್ಯಾಂಡ್ ಆಕ್ವೈರ್ ಮಾಡಿಕೊಳ್ಳುವುದಕ್ಕೆ ಅನುವುಮಾಡಿಕೊಡಬೇಕು ಇಲ್ಲವೆಂದರೆ ನಿಮ್ಮ ಈ ಬಿಲ್ಲಿನ ಉದ್ದೇಶ ಸಫಲವಾಗುವುದಿಲ್ಲ. ಏತಕ್ಕೆಂದರೆ ಅವರು ಮನೆಕಟ್ಟಲು ಜಾಗ ಸಿಗಲಿಲ್ಲವೆಂದರೆ ಪುನಃ ಪಟ್ಟಣದೊಳಗೇ ಬಂದು ಬಹುಮಹಡಿಗಳನ್ನು ಕಟ್ಟಿಸಿಕೊಂಡರೆ ಜನಸಾಂದ್ರತೆ ಇನ್ನೂ ಹೆಚ್ಚಾಗುವಂಥಾ ಪರಿಸ್ಥಿತಿ ಬರುತ್ತದೆ. ಆದುದರಿಂದ ಇದನ್ನು ಸಹ ತಾವು ಗಮನದಲ್ಲಿಟ್ಟುಕೊಳ್ಳಬೇಕು. ಇದಕ್ಕೆ ತಾವು ಪರಿಹಾರ ರೂಪದಲ್ಲಿ ಬೇರೆ ಜಮೀನನ್ನು ಒದಗಿಸಿಕೊಡುವುದು ಸೂಕ್ತವಾಗಿದೆ. ಮತ್ತೆ ತಾವು ಇವತ್ತು ಏನು ಗ್ರೀನ್‌ಬೆಲ್ಟ್ ಏರಿಯಾ ಎಂದು ನಿಗದಿಮಾಡಿದ್ದೀರಿ, ಆ ಜಾಗದಲ್ಲಿ ತಕ್ಷಣವೇ ಹಸಿರು ಕ್ರಾಂತಿಯನ್ನುಂಟು ಮಾಡುವ ರೀತಿಯಲ್ಲಿ ಅರಣ್ಯ ಖಾತೆಯವರ ಸಹಾಯವನ್ನು ಪಡೆದುಕೊಂಡು ಅಲ್ಲಿ ಸಸಿಗಳನ್ನು ನೆಡುವಂಥಾ ಕೆಲಸವನ್ನು ಮಾಡಬೇಕು. ಈಗ ಸಸಿಗಳನ್ನು ಫ್ರೀಯಾಗಿ ಕೊಡುವಂಥಾ ಕಾರ್ಯಕ್ರಮವನ್ನು ಅವರು ಈಗಾಗಲೇ ಜಾರಿಯಲ್ಲಿ ತಂದಿದ್ದಾರೆ. ಆದರೆ ಆ ರೀತಿಯಾಗಿ ಸಸಿಗಳನ್ನು ಹಂಚಿದ ಮೇಲೆ ಅವುಗಳನ್ನು ಸರಿಯಾಗಿ ನೋಡಿಕೊಳ್ಳಬೇಕಾಗುತ್ತದೆ. ಅವುಗಳ ಆರೈಕೆ ಎಷ್ಟರಮಟ್ಟಿಗೆ ಆಗುತ್ತಿದೆಯೋ

ಗೊತ್ತಿಲ್ಲ. ಸಾವಿರಗಟ್ಟಲೆ ಸಸಿಗಳನ್ನು ವಿತರಣೆ ಮಾಡಿರತಕ್ಕದ್ದು ಲೆಕ್ಕದಲ್ಲಿ ಕಂಡುಬರುತ್ತದೆ. ಆದರೆ ಆ ಸಸಿಗಳನ್ನು ನೆಟ್ಟು ಮೇಲೆ ಅವುಗಳ ಆರೈಕೆಯ ಬಗ್ಗೆ ಕೂಡ ಸೂಕ್ತವಾದ ಗಮನವನ್ನು ಕೊಡಬೇಕಾಗುತ್ತದೆ. ಆದರೆ ಈ ದಿಶೆಯಲ್ಲಿ ನಿಮ್ಮ ಇಲಾಖೆಯವರು ಏನು ಕ್ರಮವನ್ನು ಕೈಗೊಂಡಿದ್ದಾರೋ ಗೊತ್ತಿಲ್ಲ. ಇದರ ಬಗ್ಗೆ ಗಮನಹರಿಸಬೇಕೆಂದು ಹೇಳಿ, ಈಗ ಮಾನ್ಯ ಸಚಿವರು ತಂದಿರತಕ್ಕ ತಿದ್ದುಪಡಿಯನು ಒಪ್ಪಿಕೊಂಡು ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ. ರಾಮಚಂದ್ರರಾವ್ (ಉಲ್ಲಾಳ).— ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ತಂದಿರತಕ್ಕ ಈ ತಿದ್ದುಪಡಿಯನ್ನು ಸ್ವಾಗತಮಾಡುತ್ತೇನೆ. ಗ್ರೀನ್‌ಬೆಲ್ಟ್ ಏರಿಯಾ ಎಂದು ಡಿಕ್ಲೇರ್ ಮಾಡುವಾಗ ತಾವು ಆ ಪ್ರದೇಶದಲ್ಲಿರತಕ್ಕವರಿಗೆ ಬೇರೆ ಜಾಗವನ್ನು ಕೊಡುವುದಕ್ಕೆ ಸೂಕ್ತವಾದ ಏರ್ಪಾಡನ್ನು ಮಾಡಬೇಕು ಇಲ್ಲದಿದ್ದರೆ ಬಹಳ ತೊಂದರೆಯಾಗುತ್ತದೆ. ಏತಕ್ಕೆಂದರೆ ಮಂಗಳೂರಿನಲ್ಲಿ ಟೌನ್‌ಪ್ಲಾನ್ ನವರು ಒಂದು ಪ್ಲಾನ್ ಹಾಕಿದರು. ಪ್ಲಾನ್ ಹಾಕಿದಾಗ ಅದಕ್ಕೆ ಸಾವಿರಾರು ಜನರಿಂದ ಆಕ್ಷೇಪಣೆ ಬಂದಿದೆ. ಆ ತರಹ ಇದಕ್ಕೂ ಆಗಬಾರದು ಆ ರೀತಿಯಲ್ಲಿ ತಾವುಮಾಡಿ. ಇನ್ನು ಎರಡನೆಯದಾಗಿ ಈಗಾಗಲೇ ಮಾನ್ಯ ಸದಸ್ಯರುಗಳು ಹೇಳಿದ ಹಾಗೆ ಜನ ಬಹಳದೊಡ್ಡ ಪ್ರಮಾಣದಲ್ಲಿ ನಗರಕ್ಕೆ ಬರುತ್ತಿದ್ದಾರೆ, ಬಂದಿದ್ದಾರೆ, ಅದನ್ನು ತಪ್ಪಿಸುವುದಕ್ಕೆ ಮತ್ತೆ ಇನ್ನುಮುಂದೆ ಆಗತಕ್ಕದ್ದನ್ನು ತಪ್ಪಿಸುವುದಕ್ಕೆ ತಾವು ಸೂಕ್ತವಾದ ಕ್ರಮವನ್ನು ಕೈಗೊಳ್ಳಬೇಕಾಗಿದೆ. ಇಲ್ಲಿಗೆ ಬಂದವರು ಏನುಮಾಡುತ್ತಾರೆ ಅವರಿಗೆ ಇರಲಿಕ್ಕೆ ಮನೆ ಸಿಕ್ಕುವುದಿಲ್ಲ, ಆಗ ಅವರು ಇದ್ದ ಜಾಗದಲ್ಲಿಯೇ ಗುಡಿಸಲುಗಳನ್ನು ಹಾಕಿಕೊಂಡು ಬಿಟ್ಟುಕೊಳಚೆಪ್ರದೇಶಗಳನ್ನು ನಿರ್ಮಾಣಮಾಡಿಕೊಂಡು ಬಿಡುತ್ತಾರೆ. ಹೀಗಾಗಿ ಬ್ಯೂಟಿಫುಲ್ ಸಿಟಿ ಹೋಗಿ, ಹಾಳಾಗುತ್ತಿದೆ. ಆದುದರಿಂದ ಸಿಟಿ ಬ್ಯೂಟಿಫುಲ್ ಆಗಿರಬೇಕಾಗಿದ್ದರೆ ಇನ್ನು 3-4 ಡಿಕೇಡ್‌ವರೆಗೆ ಹೊರಗಿನಿಂದ ಜಾಸ್ತಿ ಜನ ವಲಸೆ ಬರತಕ್ಕದ್ದನ್ನು ನಿಲ್ಲಿಸಬೇಕೆಂದು ಹೇಳಬಯಸುತ್ತೇನೆ. ಇವತ್ತು ಪಟ್ಟಣಗಳಲ್ಲಿ ಮನೆಗಳನ್ನು ಕಟ್ಟಬೇಕಾಗಿದ್ದರೆ ಆಗಲೇ ಮಾನ್ಯ ಸದಸ್ಯರು ಹೇಳಿದಹಾಗೆ ಕ್ರಮಬದ್ಧವಾದ ವ್ಯವಸ್ಥೆ ಮಾಡಿಕೊಂಡು ಕಟ್ಟಬೇಕು ಇಲ್ಲದಿದ್ದರೆ ಏನು ಆಗುತ್ತಿದೆ ಎಂದರೆ ಅವರು ಇಲ್ಲಿಯೇ ತಳವೂರಿಕೊಳಚೆ ಪ್ರದೇಶಗಳನ್ನು ನಿರ್ಮಾಣ ಮಾಡಿಬಿಡುತ್ತಾರೆ. ಆದುದರಿಂದ ಇದನ್ನು ತಾವು ಪರಿಣಾಮಕಾರಿಯಾಗಿ ಮಾಡಬೇಕೆಂದು ಹೇಳುತ್ತಾ, ಬಡಜನರ ಗೋರಿಯ ಮೇಲೆ ಈ ತರಹ ಬ್ಯೂಟಿಫಿಕೇಷನ್ ಮಾಡುವುದಕ್ಕೆ ಹೋಗಬಾರದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

1-30 p. m.

ಶ್ರೀ ವೈ ಕೆ. ರಾಮಯ್ಯ (ಕುಣಿಗಲ್) — ಸನ್ಮಾನ್ಯ ಅಧ್ಯಕ್ಷರೇ, ಈ ಪಟ್ಟಣಗಳ ನೈರ್ಮಲ್ಯ ಮತ್ತು ಪರಿಸರವನ್ನು ಕಾಪಾಡಲಿಕ್ಕೋಸ್ಕರ ಪಟ್ಟಣಗಳ ಸುತ್ತ ಹಸಿರುಪಟ್ಟಿಯ ಒಂದು ವ್ಯವಸ್ಥೆ ಮಾಡಬೇಕು ಎಂದು ಸರ್ಕಾರದವರು ಏನು ಪ್ರಯತ್ನಪಟ್ಟಿದ್ದಾರೋ, ಪರಿಸರವನ್ನು ಕಾಪಾಡಿಕೊಳ್ಳುವ ದೃಷ್ಟಿಯಿಂದ ಇದು ಉತ್ತಮವಾದಂಥ ಪ್ರಯತ್ನ. ಆದರೆ ಇದರ ಸಫಲತೆಯನ್ನು ಪಡೆಯುವಾಗ ಸರ್ಕಾರಕ್ಕೆ ಬರುವಂಥ ಸಮಸ್ಯೆಗಳ ಕಡೆಗೆ ಸಂಪೂರ್ಣವಾದಂಥ ಗಮನಹರಿಸಿದಂತೆ ಕಾಣುವುದಿಲ್ಲವೆಂದು ನನಗನ್ನಿಸುತ್ತದೆ. ಈ ಹಸಿರು ಪಟ್ಟಿಯನ್ನು ಮಾಡುವಾಗ ಮೊದಲು ಬರತಕ್ಕ ಸಮಸ್ಯೆ ಎಂದರೆ ಶ್ರೀಮಾನ್ ರಾಮಚಂದ್ರರಾಯರು ಹೇಳಿದಹಾಗೆ, ಪಟ್ಟಣದಲ್ಲಿ ತುಂಬಿರುವ ಜನಗಳಿಗೆ ವಸತಿಸೌಕರ್ಯವನ್ನು ಒದಗಿಸಿಕೊಡುವ ದಿಶೆಯಲ್ಲಿ ಸರ್ಕಾರ ಏರ್ಪಾಟು ಮಾಡಲಿಕ್ಕೆ ಯೋಚಿಸಿದೆಯೇ. ಏಕೆಂದರೆ ಜನಗಳಿಗೆ ವಸತಿಯನ್ನು ಕಲ್ಪಿಸಿಕೊಡಬೇಕಾಗುತ್ತದೆ, ನಿವೇಶನ ಕೊಡಬೇಕಾಗುತ್ತದೆ, ಇಲ್ಲದೇಹೋದರೆ ಪಟ್ಟಣದಿಂದ ಹೊರಗೆ ಹಾಕಬೇಕಾಗುತ್ತದೆ. ಇದಕ್ಕೆ ಏನಾದರೂ ಆಲ್ಟರ್‌ನೇಟಿವ್ ಅಡ್ವಸ್ಟ್‌ಮೆಂಟ್ ಮಾಡಿದೆಯೇ ಎನ್ನುವುದು ಒಂದು. ಎರಡನೆಯದು ಹಸಿರುಪಟ್ಟಿ ಮಾಡುವುದರಿಂದ ಬೆಂಗಳೂರು ಸುತ್ತ ಇರುವ ಜಮೀನು ಅಕ್ವೈರ್ ಮಾಡಲಿಕ್ಕೆ ಹೋದರೆ ಒಂದುಕಡೆ ಗ್ರೀನ್‌ಬೆಲ್ಟ್, ಇನ್ನೊಂದು ಕಡೆ ಇಂಡಸ್ಟ್ರಿಬೆಲ್ಟ್, ಮತ್ತೊಂದು ಕಡೆ ಇನ್ನೊಂದು ಬೆಲ್ಟ್ ಬರುತ್ತದೆ. ಈ ಬೆಲ್ಟ್‌ಗಳ ಹಾವಳಿಯಲ್ಲಿ ಎಲ್ಲೋ ನಿವೇಶನಗಳನ್ನು ತೆಗೆದುಕೊಂಡು ಮಾಡುವುದಕ್ಕೆ ವಸತಿ ನಿರ್ಮಾಣಮಾಡುವಂಥ ಸಂಸ್ಥೆಗಳಿಗೆ ಕಷ್ಟವಾಗುತ್ತದೆ. ಅದಕ್ಕಾಗಿ ಏನು ಏರ್ಪಾಟು ಮಾಡುತ್ತೀರಿ. ಹಸಿರುಪಟ್ಟಿಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಆಲ್ಲದೆ ಕೈಗಾರಿಕಾ ಪಟ್ಟಿ ಏನಿದೆ ಇದನ್ನು 20-30-50 ಮೈಲಿ ಹೊರಗೆ ಹಾಕುವ ಪ್ರಯತ್ನಮಾಡುವುದು ಉತ್ತಮವೇ, ಈ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಸಾಧ್ಯವೇ. ಎಲ್ಲಕ್ಕಿಂತ ಮಿಗಿಲಾಗಿ ಹಸಿರುಪಟ್ಟಿ ವ್ಯವಸ್ಥೆಯಿಂದ ಬೆಂಗಳೂರು ನಗರದಲ್ಲಿ ನಿವೇಶನಕ್ಕಾಗಿ ಜಮೀನು ಸಿಕ್ಕುವುದು ಕಡಿಮೆಯಾಗುವುದರಿಂದ ನಿವೇಶನ ಬೆಲೆ ಗಗನಕ್ಕೆ ಮುಟ್ಟುತ್ತಾ ಇದೆ. ಈ ಪಟ್ಟಿಯ ಹಾವಳಿಯಿಂದ ಜಮೀನನ್ನು ಅಕ್ವೈರ್ ಮಾಡಲಿಕ್ಕೆ ಆಗುವುದಿಲ್ಲ. ಜಮೀನು ಅಕ್ವೈರ್ ಮಾಡಲಿಕ್ಕೆ ಹೋದರೆ ನಿವೇಶನಗಳು ಹಂಚಿಕೆಯಾಗುವುದಿಲ್ಲ. ನಿವೇಶನಗಳು ಕಡಿಮೆಯಾದಹಾಗೆ ಬೆಲೆ ಜಾಸ್ತಿಯಾಗುತ್ತದೆ. ಆದುದರಿಂದ ಸನ್ಮಾನ್ಯ ಸಚಿವರಲ್ಲಿ ಇಷ್ಟನ್ನು ಕೇಳಿಕೊಳ್ಳುತ್ತೇನೆ. ಹಸಿರುಪಟ್ಟಿ ನಿರ್ಮಾಣದ ವ್ಯವಸ್ಥೆಯನ್ನು ನಾವೆಲ್ಲರೂ ಸ್ವಾಗತಿಸು

ತ್ತೇವೆ. ಆದರೆ ಈ ಪಟ್ಟಿಯನ್ನು ಸೃಷ್ಟಿಸುವುದರ ಜೊತೆಗೆ ಉದ್ಭವಿಸುವ ಸಮಸ್ಯೆಗಳ ಪರಿಹಾರಗಳಿಗೆ ವ್ಯವಸ್ಥೆ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ವಿ. ಎಲ್. ಪಾಟೀಲ್.— ಮಾನ್ಯ ಅಧ್ಯಕ್ಷರೇ, ಬೆಂಗಳೂರು ಸುತ್ತ ಹಸಿರುಪಟ್ಟಿಯನ್ನು ಮಾಡುವಾಗ ಬೆಂಗಳೂರಿನಲ್ಲಿ ಸುಮಾರು 2000 ಎ. ಡಿ.ವರೆಗೆ ಜನಸಂಖ್ಯೆ ಎಷ್ಟು ಬೆಳೆಯುತ್ತದೆ ಎನ್ನುವುದನ್ನು ಲಕ್ಷ್ಯದಲ್ಲಿಟ್ಟುಕೊಂಡು ಮಾಡಿದ್ದೇವೆ. 1972ರಲ್ಲಿ ಏನು ಅಂದಾಜು ಇಟ್ಟುಕೊಂಡಿದ್ದರು ಅದಕ್ಕಿಂತ ಹೆಚ್ಚು ಕಿಲೋಮೀಟರ್ ಹೋಗಿದೆ. ಮಾನ್ಯ ಸ್ನೇಹಿತರು ಹೇಳಿದಹಾಗೆ, ಅನೇಕ ಕೋಆಪರೇಟಿವ್ ಸೊಸೈಟೀಸ್ ಬಂದಿದೆ, ಬಹಳಷ್ಟು ಸೊಸೈಟಿಗಳು ಗ್ರೀನ್‌ಬೆಲ್ಟ್ ವ್ಯಾಪ್ತಿಯಲ್ಲಿ ಬರುತ್ತವೆ; ಅದಕ್ಕೆ ಅದಷ್ಟು ಕಡಿಮೆ ಲಾಸ್ ಆಗಬೇಕು, ಅವರಿಗೆಲ್ಲಾ ಮನೆಗಳನ್ನು ಕಟ್ಟುವ ವ್ಯವಸ್ಥೆಯಾಗಬೇಕೆಂದು ಹೇಳಿದರು. ಅದಕ್ಕೆಲ್ಲಾ ಸೂಕ್ತ ವ್ಯವಸ್ಥೆಯನ್ನು ಮಾಡುವುದಕ್ಕೆ ಪ್ರಯತ್ನವನ್ನು ಮಾಡುತ್ತೇವೆ. ಕಾಗದಗಳನ್ನು ಒಂದೊಂದು ಡಿಪಾರ್ಟ್‌ಮೆಂಟಿಗೆ ಒಯ್ಯಬೇಕು ಅಂದರೆ ಅಡ್ಮಿನಿಸ್ಟ್ರೇಟಿವ್ ದೃಷ್ಟಿಯಿಂದ ಕಷ್ಟವಾಗುತ್ತದೆ. ಅದಕ್ಕೆ ನಮ್ಮ ಸ್ನೇಹಿತರು ಏನೇನು ಸಲಹೆಗಳನ್ನು ಕೊಟ್ಟಿದ್ದಾರೋ ಅದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಗ್ರೀನ್‌ಬೆಲ್ಟನ್ನು ಫೈನಲೈಸ್ ಮಾಡುತ್ತೇವೆ. 401 ಕೋಆಪರೇಟಿವ್ ಸೊಸೈಟೀಸ್ ಕನ್‌ವರ್ಷನ್ ಮಾಡಲಿಕ್ಕೆ ಈಗಾಗಲೇ ಪ್ರಯತ್ನ ಮಾಡಿದ್ದಾರೆ. ಗ್ರೀನ್‌ಬೆಲ್ಟ್ ಫೈನಲೈಸ್‌ಆದ ನಂತರ ಅದನ್ನು ಮಾಡುತ್ತೇವೆಂದು ಹೇಳುತ್ತೇನೆ.

Mr. Deputy Speaker. — I will now put the consideration motion to the vote of the House. The question is :

"That the Karnataka Land Revenue (Amendment) Bill, 1984 be taken into consideration"

The motion was adopted.

CLAUSE BY CLAUSE CONSIDERATION

Clause 2

Mr. Deputy Speaker.— The question is :

"That clause 2 do stand part of the Bill."

The motion was adopted and clause 2 was added to the Bill.

Clause 1 etc.

Mr. Deputy Speaker.— The question is :

"That clause 1, the long Title, the Preamble and the Enacting Formula do stand part of the Bill."

The motion was adopted and clause 1, the Long Title, the Preamble and the Enacting Formula were added to the Bill."

MOTION TO PASS

Sri V. L. Patil (Minister for Revenue).— Sir, I beg to move ;

"That the Karnataka Land Revenue (Amendment) Bill, 1984 be passed."

Mr. Deputy Speaker.— The queatiou is :

"That the Karnataka Land Revenue (Amendment) Bill, 1984 be passed."

The motion was adopted and the Bill was passed.

2. The Karnataka certain Inams Abolition (Amendmenet) Bill, 1984 motion to consider.

Sri V. L. Patil (Minister for Revenue).— Sir, I beg to move :

"That the Karnataka Certain Inams Abolition (Amendment) Bill, 1984 be taken into consideration."

The question was proposed.

ಶ್ರೀ ವಿ. ಎಲ್. ಪಾಟೀಲ್.— ಮಾನ್ಯ ಅಧ್ಯಕ್ಷರೆ, ಬಳ್ಳಾರಿ ಡಿಸ್ಟ್ರಿಕ್ಟ್ ಮತ್ತು ಕೊಳ್ಳೆಗಾಲ ತಾಲ್ಲೂಕು ಹಳೆಯ ಮದ್ರಾಸ್ ರಾಜ್ಯದಲ್ಲಿತ್ತು. ಅದರಲ್ಲಿ ಸುಮಾರು 5 ತರಹ ಇನಾಂಗಳು ಬರುತ್ತವೆ ರಿಲಿಜಿಯಸ್, ಚಾರಿಟಬಲ್, ಆರ್ಟಿಸಾನ್ಸ್ ವಿಲೇಜ್ ಸರ್ವೀಸ್, ಪರ್ಸನಲ್ ಇನಾಮ್ಸ್ ಎಲ್ಲಾ ಬರುತ್ತವೆ. ಇಲ್ಲಿ ಮೊದಲು ರಿಗ್ರಾಂಟ್ ಮಾಡುವಂಥ ಪರಿಸ್ಥಿತಿ ಇರಲಿಲ್ಲ. ಯಾರು ಇವತ್ತಿನವರೆಗೆ ಇನಾಮಿನಲ್ಲಿದ್ದಾರೆ, ಯಾರು ಜಮೀನಿನಲ್ಲಿ ಇರುತ್ತಾರೆ ಅವರಿಗೆ ರಿಗ್ರಾಂಟ್ ಮಾಡುವಂಥ ಪರಿಸ್ಥಿತಿ ಆಗ ಬೇಕಾಗಿದೆ. ರಿಗ್ರಾಂಟ್ ಮಾಡುವಂಥ ಅಧಿಕಾರವನ್ನು ಡಿ. ಸಿ.ಯವರಿಗೆ ಕೊಡಬೇಕು ಎಂದು ಮಾಡಿದ್ದೇವೆ. ಆಮೇಲೆ ರೈತರಿಗೆ ಫಾರಮ್ಸ್ ತುಂಬಲು ಅವಕಾಶ ಸಿಗಬೇಕು ಎಂಬ ಉದ್ದೇಶದಿಂದ 31ನೇ ಡಿಸೆಂಬರ್ 1984ರವರೆಗೆ ಟೈಂ ಎಕ್ಸ್‌ಟೆಂಡ್ ಮಾಡಿ ಅವರಿಗೆ ಸೌಲಭ್ಯಗಳನ್ನು ಮಾಡಿಕೊಡುವುದಕ್ಕೆ ಅವಕಾಶ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ನಾಗನಗೌಡ (ಕುರುಗೋಡು).— ಮಾನ್ಯ ಅಧ್ಯಕ್ಷರೆ, ಕರ್ನಾಟಕ ಸರ್ಟನ್ ಇನಾಮ್ಸ್ ಅಬಾಲಿಷನ್ (ಅಮೆಂಡ್‌ಮೆಂಟ್) ಬಿಲ್ ಏನಿದೆ ಇದು ಕೇವಲ ಬಳ್ಳಾರಿ ಮತ್ತು ಕೊಳ್ಳೆಗಾಲ ಸೌತ್ ಕೆನರಾಕ್ಕೆ ಮಾತ್ರ ಅನ್ವಯಿಸುತ್ತದೆ. ಇದರ ಹಿನ್ನೆಲೆಯನ್ನು ಹೇಳಬೇಕಾದರೆ 200 ವರ್ಷಗಳ ಹಿಂದೆ ಬ್ರಿಟಿಷರ ಸರ್ಕಾರ, ನಿಜಾಮರ ಸರ್ಕಾರ ಇನಾಮನ್ನು ಕೊಟ್ಟಿತ್ತು, ಅದು ತಲೆತಲಾಂತರದಿಂದ ರಿಜಿಸ್ಟರಾಗಿ ಕೈಬದಲಾಗಿದೆ. ಮದ್ರಾಸ್ ಸರ್ಕಾರ ಇವರ ಬಗ್ಗೆ ಕಾಂಪನ್ಸೇಷನ್ ಕೊಟ್ಟಿದೆ. ಎಷ್ಟೋ ಜನರಿಗೆ ರಿಜಿಸ್ಟ್ರೇಷನ್ ಆಗಿದೆ, That is the foremost. That you have accepted. ಟೈಟಲಡೀಡ್ಸ್, ಇಲ್ಲದೆ ಕಾಂಪನ್ಸೇಷನ್ ಕೊಡುತ್ತೀರಾ ? ಎರಡನೆಯದಾಗಿ ಸ್ಟೇಟ್ ರೀ ಆರ್ಗನೈಸೇಷನ್ ಆಕ್ಟ್ ಪ್ರಕಾರ ಹಿಂದಿನ ಸರ್ಕಾರ ಏನು ಮಾಡಿತ್ತು, ಮದ್ರಾಸ್ ಸರ್ಕಾರ ಏನು ಮಾಡಿತ್ತು ಅದನ್ನು ಹಾನರ್ ಮಾಡುವುದು ಈಗಿನ ಸರ್ಕಾರದ ಕರ್ತವ್ಯವಾಗಿದೆ. ದಯಮಾಡಿ ಇಲ್ಲಿ ಡೆಪ್ಯುಟಿ ಕಮಿಷನರಿಗೆ ಅರ್ಜಿ ಸಲ್ಲಿಸುವುದು ಬಿಟ್ಟು ತಹಶೀಲ್ದಾರರಿಗೆ ಅರ್ಜಿ ಸಲ್ಲಿಸುವುದನ್ನು ಒಪ್ಪಿಕೊಂಡು Suo Moto 20 times ಕೊಟ್ಟುಮಾಡಬೇಕು ಎಂದು ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಾ ಇದ್ದೇನೆ. ಇದರಿಂದ ರೈತರಿಗೆ ಹೆರಾಸ್‌ಮೆಂಟ್ ಕಡಿಮೆ ಆಗುತ್ತದೆ. ಮತ್ತು ಈಗಿರತಕ್ಕ ತಪ್ಪನ್ನು ಸರಿಮಾಡಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ ಎಂದು ತಮ್ಮ ಮುಖಾಂತರ ಒತ್ತಾಯಿಸುತ್ತೇನೆ.

ಶ್ರೀ ಎಚ್. ಗಂಗಾಧರನ್.— ಪವರ್‌ಅನ್ನು ತಹಸೀಲ್ದಾರ್‌ರವರಿಗೆ ಡೆಲಿಗೇಟ್‌ಮಾಡಬಹುದು. ಆ ರೀತಿ ಮಾಡಿ.

ಶ್ರೀ ಶಂಕರ್‌ರೆಡ್ಡಿ.— ಮಾನ್ಯ ಮಂತ್ರಿಗಳು ಪರ್ಸನಲ್ ಇನಾಮ್ ಅಬಾಲಿಷನ್ ಆಕ್ಟ್ ತಂದಿದ್ದಾರೆ. ಅದರ ಬಗ್ಗೆ ಈಗಾಗಲೇ ನಮ್ಮಲ್ಲಿ ಮದ್ರಾಸ್ ಸರ್ಕಾರ ಇದ್ದಂತಹ ಕಾಲದಲ್ಲಿ ಎನ್‌ಫ್ರಾಂಚೈಸ್‌ಮೆಂಟ್ ಮಾಡಿದ್ದಾರೆ. ಅದರಲ್ಲಿ ನಮ್ಮ ಬಳ್ಳಾರಿ ಜಿಲ್ಲೆಯ ಬೇರೆ ಬೇರೆ ತಾಲ್ಲೂಕುಗಳು ಹಾಗೂ ಆಂಧ್ರಪ್ರದೇಶದ ಕೆಲವು ಭಾಗಗಳಲ್ಲಿ ಆ ಬಗ್ಗೆ ಅಸೆಸ್‌ಮೆಂಟ್‌ಮಾಡಿ ಅದಕ್ಕಾಗಿ ಇರುವಂತಹ ಟೈಟಲ್ ಡೀಡ್ ಅನ್ನೂ ಸಹ ಕೊಟ್ಟಿದ್ದಾರೆ. ಈಗ ಏನು 15 ಟೈಂ ಹಾಗೂ 20 ಟೈಂ ಹಣವನ್ನು ಕೊಡಬೇಕೆಂದು ಹೇಳುತ್ತಿದ್ದಾರೆ. ಅದರ ಬದಲಿಗೆ ಪಕ್ಕದ ಜಮೀನು ಅಸೆಸ್‌ಮೆಂಟ್‌ಮಾಡಿ, ಅದೇ ಅಸೆಸ್‌ಮೆಂಟ್ ಅನ್ನು ಈ ಜಮೀನಿಗೂ ಕೊಡುವ ಏರ್ಪಾಡು ಮಾಡಬೇಕು.

ಶ್ರೀ ಎಸ್. ಬಂಗಾರಪ್ಪ.— ಸನ್ಮಾನ್ಯ ಉಪಾಧ್ಯಕ್ಷರೇ ನನಗೆ ಈ ಮಸೂದೆಯ ವಿಚಾರದಲ್ಲಿ ಹೆಚ್ಚು ವಿವರಗಳನ್ನು ಬಳ್ಳಾರಿ ಜಿಲ್ಲೆಯಿಂದ ಬಂದಿರತಕ್ಕಂತಹ ಮಾನ್ಯ ಸದಸ್ಯರುಗಳು ಕೆಲವು ದಿವಸಗಳ ಹಿಂದೆಯೇ ನನ್ನ ಹತ್ತಿರ ಚರ್ಚೆಮಾಡಿ ತಿಳಿಸಿದ್ದಾರೆ....

ಶ್ರೀ ಎ. ಲಕ್ಷ್ಮೀಸಾಗರ್.— ಅವರು ಮಾತನಾಡಿರುವ ಪ್ರಕಾರವೇ ಇದನ್ನು ಮಾಡುತ್ತಿದ್ದೇವೆ. ಅವರೇ ಹೇಳಿರುವ ಪ್ರಕಾರ ತಹಸೀಲ್ದಾರ್‌ರವರಿಗೆ ಈ ಒಂದು ಅಧಿಕಾರವನ್ನು ಕೊಡಬೇಕೆಂದು ಏನು ಹೇಳಿದ್ದಾರೆ ಅದಕ್ಕೆ ಸಂಬಂಧಪಟ್ಟಂತಹ ತಿದ್ದುಪಡಿಯನ್ನು ಮೂವ್ ಮಾಡುವವರಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.— ಅದು ಒಳ್ಳೆಯದು. ರಾಜ್ಯ ಪುನರ್ವಿಂಗಡಣೆಯಾದಾಗ ಲಯಬಲಿಟೀಸ್ ಸೇಫ್‌ಗಾರ್ಡ್ ಮಾಡಲು ಕಾನೂನು ಪ್ರಕಾರ ಇದು ಆಗಿರತಕ್ಕಂತಹದ್ದು. ತಮಗೆ ಗೊತ್ತಿದ್ದ ಹಾಗೆ ಇದರ ಲೀಗಲ್ ಕಾನ್‌ಸ್ಕ್ವೆನ್ಸ್ ಏನಾಗುತ್ತದೆಂಬುದನ್ನು ನಾನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಅದರ ವಿವರಗಳಿಗೆ ನಾನು ಹೋಗುವುದಿಲ್ಲ. ಯಾರು ಗೇಣಿದಾರರು ಇದ್ದಾರೆ, ಅವರಿಗೆ ಹಕ್ಕನ್ನು ಕೊಡಬೇಕೆಂದು ಮೊದಲೇ ಮನಗಂಡು ಸರ್ಕಾರದವರು ಹಿಂದೆ ಕೆಲವೊಮ್ಮೆ ಅವರ ಹಕ್ಕನ್ನು ಮಾನ್ಯತೆಮಾಡಿ ಆ ಬಗ್ಗೆ ಕೆಲವು ಕಾರ್ಯಕ್ರಮಗಳನ್ನು ಹಿಂದೆಯೇ ತೆಗೆದುಕೊಂಡಿದ್ದಾರೆ. ಅವರು ಪುನಃ ಹೊಸದಾಗಿ ಅರ್ಜಿಯನ್ನು ಹಾಕಬೇಕೆಂದು ನೀವು ಏಕೆ ಹೇಳುತ್ತಿದ್ದೀರಿ ? ಅದು ತಹಸೀಲ್ದಾರ ಇರಬಹುದು, ಡಿ. ಸಿ.

ಇರಬಹುದು ಅಥವಾ ಎ. ಸಿ. ಇರಬಹುದು. ಈಗ ಆ ಪ್ರಶ್ನೆ ಉದ್ಭವಿಸುವುದಿಲ್ಲ. ಹಿಂದೆ ತುಂಗ ಭದ್ರಾ ಅಣೆಕಟ್ಟನ್ನು ಕಟ್ಟುವಾಗ ಮತ್ತೆ ಮುಂದೆ ಅದರ ಚಾನಲ್ ಅನ್ನು ಮಾಡುವಾಗ ಜಮೀನನ್ನು ಸ್ವಾಧೀನಪಡಿಸಿಕೊಳ್ಳಬೇಕಾಗಿತ್ತು. ಅದರಂತೆ ಲ್ಯಾಂಡ್ ಅನ್ನು ಸ್ವಾಧೀನಪಡಿಸಿಕೊಂಡು Compensation was paid to the owner of the land treating his title deed.

ಇದನ್ನು it was acquired under the land Acquisition Act. .. ಆದರೆ ಈಗ ಅದಕ್ಕಾಗಿ ಹೊಸದಾಗಿ ಅರ್ಜಿಯನ್ನು ಹಾಕಬೇಕೆಂದು ಏಕೆ ಕೇಳುತ್ತಿದ್ದೀರಿ ? ಇದಕ್ಕೋಸ್ಕರ ಮತ್ತೊಮ್ಮೆ ಅರ್ಜಿಯನ್ನು ಹಾಕುವಂತಹ ಅವಶ್ಯಕತೆ ಇಲ್ಲ. ಅದು ಮಾನ್ಯ ಸದಸ್ಯರ ಅಭಿಪ್ರಾಯ ಕೂಡ. ಅದಕ್ಕೆ ಪರಿಹಾರವನ್ನು ಕೊಡಬೇಕಾದರೆ ಇನಾಂ ಅಬಾಲಿಷನ್ ಆಕ್ಟ್ 1955ರ ಪ್ರಕಾರ ಭೂಮಿಯನ್ನು ಸ್ವಾಧೀನಪಡಿಸಿಕೊಂಡು afterwards you claim compensation under the Land Acquisition Act. On the other hand what the department then did was that they accepted the title deed which was acquired under the Land Acquisition Act ಪ್ರಕಾರ ತೆಗೆದುಕೊಂಡು ಬಿಟ್ಟಿದ್ದೀರಿ. ಅದನ್ನು ಸರ್ಕಾರಕ್ಕೆ ತೆಗೆದುಕೊಂಡಮೇಲೆ ಮತ್ತೆ ಅವರು ಏಕೆ ಅರ್ಜಿಯನ್ನು ಹಾಕಬೇಕೆಂದು ಕೇಳುತ್ತಿದ್ದೀರಿ ? ಅವರಲ್ಲಿರತಕ್ಕಂತಹ ಟೈಟಲ್ ಡೀಡ್ ಅನ್ನು ಒಪ್ಪಿಕೊಂಡು ಅವರಿಗೆ ಪರಿಹಾರವನ್ನು ಕೊಟ್ಟಮೇಲೆ ಅವರ ಮಾಲೀಕತ್ವವನ್ನು ಒಪ್ಪಿಕೊಂಡಹಾಗೆ ಆಯಿತು ಅದನ್ನು ಒಪ್ಪಿಕೊಂಡಮೇಲೆ, ಅವರಿಂದ ಮತ್ತೆ ಏಕೆ ಅರ್ಜಿ ಹಾಕಬೇಕೆಂದು ಹೇಳುತ್ತೀರಿ ? ಇದರಲ್ಲಿ ಏನೂ ಅನುಮಾನಪಡಬೇಕಾಗಿಲ್ಲ. ಇದನ್ನು ವಿಚಾರಮಾಡುವುದು ಒಳ್ಳೆಯದು. ಅಂತಹ ಲ್ಯಾಂಡ್ ತುಂಬಾ ಇದೆ ಎಂಬ ಅಭಿಪ್ರಾಯವನ್ನು ಕೊಡುತ್ತಿದ್ದಾರೆ. ಜೊತೆಗೆ ಹಿಂದೆ ಇದ್ದಂತಹ ಮದ್ರಾಸ್ ಸರ್ಕಾರದ ಅಧೀನದಲ್ಲಿ ಬಳ್ಳಾರಿ ಜಿಲ್ಲೆ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆ ರೀತಿಯಲ್ಲಿ ಲ್ಯಾಂಡ್‌ಗಳಿಗೆ ಅವಾಗಲೇ ಮಾನ್ಯತೆಯನ್ನು ಕೊಟ್ಟು ಅದಕ್ಕೆ ಪರಿಹಾರವನ್ನು ಕೊಟ್ಟಾಗಿದೆ. ಅದನ್ನು ಏಕೆ ಪುನಃ ರೇಕಪ್ ಮಾಡುತ್ತೀರಿ It is a matter for beautiful legal debate ಲೀಗಲ್ ಆಸ್‌ಪೆಕ್ಟ್ಸ್ ಏನು ಎಂಬುದನ್ನು ವಿಚಾರಮಾಡಿ ನೀವೇ ಒಪ್ಪಿರತಕ್ಕಂತ ಹಕ್ಕಿನ ಬಗ್ಗೆ ಪುನಃ ಅರ್ಜಿಯನ್ನು ಹಾಕಬೇಕೆಂದು ನೀವೇ ಹೇಳಿದ ಹಾಗೆ ಆಗುತ್ತದೆ. ಇದನ್ನು ವಿಚಾರಮಾಡಿ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

ಶ್ರೀ ಶಂಕರ ರೆಡ್ಡಿ .— ಆಂಧ್ರ ಸರ್ಕಾರದವರು ಟೈಟಲ್ ಡೀಡ್ ಅನ್ನು ಹಾನರ್ ಮಾಡಿದ್ದಾರೆ

ಶ್ರೀ ಎಸ್. ಬಂಗಾರಪ್ಪ.— ಅದರ ವಿವರಗಳಿಗೆ ನಾನು ಹೋಗುವುದಿಲ್ಲ. ಏನು ಎನ್ನತಕ್ಕಂತಹ ಅಭಿಪ್ರಾಯವನ್ನು ತಿಳಿಸಿದರೆ ಒಳ್ಳೆಯದು.

ಶ್ರೀ ವಿ. ಎಲ್. ಪಾಟೀಲ್.— ತಹಸೀಲ್ದಾರರವರಿಗೆ ಈಗಾಗಲೇ ಅಂತಹ ಒಂದು ಅಧಿಕಾರ ಇದೆ. ವಿಲೇಜ್ ಅಬಾಲಿಷನ್ ಆಕ್ಟ್ ಪ್ರಕಾರ ಅವರಿಗೆ ಈಗಾಗಲೇ ಆ ಒಂದು ಅಧಿಕಾರ ಇದೆ. ಮತ್ತೆ ತಾವು ಹೇಳಿದಹಾಗೆ ವಿಲೇಜ್ ಮ್ಯಾಟರ್ಸ್ ಅನೇಕ ಕಡೆ 1978ರಲ್ಲಿ ಅಬೊಲಿಷನ್ ಆಯಿತು. ಆವತ್ತಿನ ವರೆಗೆ ತೊಂದರೆ ಇದೆ ಅಂತ ಹೇಳುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.— ಒಳ್ಳೆಯ ಗಥೆಯಾಯಿತಲ್ಲ. ನಾವು ಕೇಳಿದ ಪಾಯಿಂಟ್‌ಗಳಿಗೆ ಉತ್ತರವನ್ನೇ ಕೊಡದಿದ್ದರೆ ಹೇಗೆ ? ನಾವು ಗಂಟೆಗಟ್ಟಲೆ ಭಾಷಣವನ್ನು ಮಾಡುವುದು ಬೇಡ ಅಂತ ತಿಳಿದು ಕೆಲವು ವಿವರಗಳನ್ನು ಮಾತ್ರ ಕೇಳಿದರೆ. ಮಾನ್ಯ ಮಂತ್ರಿಗಳೂ ಅದಕ್ಕೂ ಉತ್ತರವನ್ನು ಕೊಡದಿದ್ದರೆ ಹೇಗೆ ? ಹಿಂದೆ 15 ಟೈಮ್ಸ್ ಪೆನಾಲ್ಟಿಯನ್ನು ಅವರಿಗೆ ಹಾಕಿ, ಅವರಲ್ಲಿರತಕ್ಕಂತಹ ಟೈಟಲ್ ಡೀಡನ್ನು ಅಕ್ಸೆಪ್ಟ್ ಮಾಡಿದ್ದೀರಿ. Under the Acquisition Act you can make payment for having acquired certain individual's land under the Law. ಆವಾಗ ಅದನ್ನು ನೀವು You have accepted the title deed of that property. You have accepted long back when the acquisition has taken place for the purposes or construction or T. B. Dam ...
ಅದಕ್ಕೋಸ್ಕರ ಅವರ ಟೈಟಲ್ ಅನ್ನು ಸರ್ಕಾರದವರು ಆಗ ಆಕ್ಸೆಪ್ಟ್ ಮಾಡಿದ್ದಾರೆ. ಈಗ ಮತ್ತೆ ಅವರೂ ಕೂಡ ಅಪ್ಲಿಕೇಶನ್ ಹಾಕಿ ಅಂತ ಏಕೆ ಹೇಳುತ್ತೀರಾ ಹಿಂದೆ ಅದಂತಹವುಗಳನ್ನು ಹೊರತುಪಡಿಸಿ ಮಾಡಿದರೆ ಒಳ್ಳೆಯದು ಅಂತ ಕಾಣುತ್ತೆ, ಅದನ್ನಾದರೂ ತಿಳಿಸಿ.

ಶ್ರೀ ವಿ. ಎಲ್. ಪಾಟೀಲ್.— 1950ರಲ್ಲಿ ಇದ್ದಂತೆ ಇನಾಂ ಅಬಾಲಿಷನ್ ಆಕ್ಟ್ ಪ್ರಕಾರ ಅದು ನಮ್ಮ ರಾಜ್ಯದಲ್ಲಿ 1978ರಲ್ಲಿ ಜಾರಿಗೆ ಬಂತು. ಆವಾಗ ಟೈಟಲ್ ಇರತಕ್ಕಂತಹವರು ಒಬ್ಬರಿಂದ

ಮತ್ತೊಬ್ಬರಿಗೆ ಬದಲಾವಣೆ ಮಾಡತಕ್ಕಂತಹ ಅಧಿಕಾರ ಇತ್ತು. ಆ ಕಾನೂನನ್ನು ರದ್ದುಪಡಿಸಿದ್ದರಿಂದ ಅದು ಇದರಲ್ಲೇ ಬಂದಿದೆ. ಅವರಿಗೆ ಮತ್ತೆ ರೀಗ್ರಾಂಟ್ ಮಾಡಿ, ಅವರಿಗೆ 6 ಟೈಂನಿಂದ 15 ಟೈಮ್ಸ್ ಕ್ವಿಟ್‌ರೆಂಟ್ ಕೊಡಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.— ಮೊದಲೇ ಒಪ್ಪಿದ್ದೀರಲ್ಲಾ.

ಶ್ರೀ ವಿ. ಎಲ್. ಪಾಟೀಲ್.— ಮೊದಲು ಆ ಕಾಲಕ್ಕೆ ಒಪ್ಪಿದ್ದಾರೆ. ಮೊನ್ನೆ ಇದು ಅಬಾಲಿಷನ್ ಆದ ನಂತರ ಹೇಗೆ ಮಾಡುವುದಕ್ಕಾಗುತ್ತದೆ, ಮೊದಲು ಒಬ್ಬರಿಂದ ಇನ್ನೊಬ್ಬರಿಗೆ ಮಾರುವಂತಹ ಅಧಿಕಾರ ಇತ್ತು. ಬೇರೆಯವರಿಗೆ ಕೊಡುವಂತಹ ಅಧಿಕಾರ ಇತ್ತು. ಹಾಗೂ ವರ್ಗಾವಣೆ ಮಾಡುವಂತಹ ಅಧಿಕಾರ ಕೂಡ ಇತ್ತು. ಮೊನ್ನೆ ಅಬಾಲಿಷನ್ ಆದನಂತರ ಆ ಅಧಿಕಾರವೆಲ್ಲಾ ಹೋಗಿ ಬಿಟ್ಟಿದೆ.

ಶ್ರೀ ಎಸ್. ಬಂಗಾರಪ್ಪ.— ಟ್ರಾನ್ಸ್‌ಫರ್ ಮಾಡುವುದಕ್ಕೆ ಲ್ಯಾಂಡ್ ಇಲ್ಲ.

ಶ್ರೀ ವಿ. ಎಲ್. ಪಾಟೀಲ್.— ಎಷ್ಟೊಂದು ಲ್ಯಾಂಡ್ ಇದೆ ಸ್ವಾಮಿ.

ಶ್ರೀ ಎಸ್. ಬಂಗಾರಪ್ಪ.— ಹಿಂದೆ ಅಕ್ವೈರ್ ಮಾಡಿರತಕ್ಕದ್ದಕ್ಕೂ ಅಪ್ಲಿಕೇಷನ್ ಹಾಕುವುದಕ್ಕೆ ಪ್ರಾವಿಷನ್ ಇದೆ. ಹಿಂದೆ ಅವರಿಗೆ ಕೊಟ್ಟಿದ್ದರೂ ಕೂಡಾ ಮತ್ತೆ ಅಪ್ಲಿಕೇಷನ್ ಹಾಕಿಕೊಳ್ಳಬೇಕೆಂದು ಮಾಡಿದ್ದೀರಿ. You exclude them. You can say in this bill that those lands which were acquired under the Land Acquisition Act are excluded. You can put that in the statement of objects and reasons. ಎನ್ನುವ ಮಾತನ್ನು ಹೇಳಿ ಸ್ವಾಮಿ. ಸ್ಟೇಟ್‌ಮೆಂಟ್ ಆಫ್ ಅಬ್ಜೆಕ್ಟ್ಸ್ ಅಂಡ್ ರೀಸನ್ಸ್‌ನಲ್ಲಿ ಇದನ್ನು ಹೇಳಬೇಕಾಗಿತ್ತು.

ಶ್ರೀ ಎಂ. ರಾಮಪ್ಪ.— ಸರ್ವೀಸ್ ಇನಾಂ ಮತ್ತು ಪರ್ಸನಲ್ ಇನಾಂ ಎಂದು ಎರಡು ರೀತಿ ಇದೆ. ಸರ್ವೀಸ್ ಇನಾಂ ಎಂದರೆ ಅದರಲ್ಲಿ ಏನಾದರೂ ಮಾಡಿಕೊಳ್ಳಬಹುದು.

ಶ್ರೀ ವಿ. ಎಲ್. ಪಾಟೀಲ್.— 1978ರಲ್ಲಿ ಇನಾಂ ಅಬಾಲಿಶನ್ ಆಗುವವರೆಗೆ ಆ ರೀತಿಯ ಪದ್ಧತಿ ನಡೆದುಬಂದಿತ್ತು.

ಶ್ರೀ ನಾಗನಗೌಡ ಪಾಟೀಲ್.— ರಾಜ್ಯದ ಪುನರ್ವಿಂಗಡನೆ ಆದಾಗ ಎನ್.ಫ್ರಾಂಚೈಸ್‌ಮೆಂಟ್ ಏನಿತ್ತು ಅದನ್ನು ಮುಂದುವರಿಸಿಕೊಂಡು ಹೋಗಿ. ತಮಗೆ ಹಾನರ್ ಮಾಡುವುದಕ್ಕೆ ಅಧಿಕಾರ ಇದೆ.

ಶ್ರೀ ವಿ. ಎಲ್. ಪಾಟೀಲ್.— 1978ರವರೆಗೆ ಹಾನರ್ ಮಾಡಿದ್ದೇವೆ.

ಶ್ರೀ ನಾಗನಗೌಡ ಪಾಟೀಲ್.— ಮತ್ತೆ ಡೆಪ್ಯುಟಿ ಕಮಿಷನರ್ ಮುಂದೆ ಏಕೆ ಹೋಗಬೇಕು ? ತಾವು ಸೊಮೊಟೋ ಮಾಡಿ ಸ್ವಾಮಿ ? ತಹಶೀಲ್ದಾರ್‌ರವರ ಮುಂದೆ ಆ ಬಗ್ಗೆ 20ರಷ್ಟು ಕೊಟ್ಟು ಕನ್‌ಫರ್ಮ ಮಾಡಿದ್ದು ಮತ್ತೆ ಡೆಪ್ಯುಟಿ ಕಮಿಷನರ್ ಹತ್ತಿರ, ಲ್ಯಾಂಡ್ ಟ್ರಿಬ್ಯುನಲ್ ಹತ್ತಿರ ಏಕೆ ಹೋಗಬೇಕು ? ತಾವು ಸ್ಟೇಟ್‌ಆವೇ ಏಕೆ ಆರ್ಡರ್ ಇಶ್ಯೂ ಮಾಡಬಾರದು ?

ಶ್ರೀ ವಿ. ಎಲ್. ಪಾಟೀಲ್.— ಇವತ್ತು ಲ್ಯಾಂಡ್‌ನ ಮಾಲೀಕರು ಒಬ್ಬರು ಇದ್ದಾರೆ. ರೈತರು ಬೇರೆಯವರು ಇದ್ದಾರೆ. ಸ್ಟೇಟ್‌ಆವೇ ಹೇಗೆ ಮಾಡುವುದಕ್ಕೆ ಬರುತ್ತದೆ ? ಅವರಿಗೂ ಟ್ರಿಬ್ಯುನಲ್ ಮುಂದೆ ಹೋಗುವುದಕ್ಕೆ ಟೈಂ ಕೊಟ್ಟಿದ್ದೇವೆ.

ಶ್ರೀ ಶಂಕರರೆಡ್ಡಿ.— ಇವತ್ತು ಸ್ಟೇಟ್‌ಆವೇ ಅವರಿಗೆ ಪಟ್ಟಾ ಕೊಟ್ಟುಬಿಡಿ.

ಶ್ರೀ ವಿ. ಎಲ್. ಪಾಟೀಲ್.— ಇವತ್ತು ಒಂದು ಭೂಮಿಯ ಟೆನೆಂಟ್ ಒಬ್ಬರು ಇದ್ದರೆ ಆ ಭೂಮಿಯ ಇನಾಮುದಾರರು ಬೇರೊಬ್ಬರು ಇರುತ್ತಾರೆ. ಆದ್ದರಿಂದ ಟೆನೆಂಟ್ಸ್ ಯಾರು ಇದ್ದಾರೆ ಅವರು ಟ್ರಿಬ್ಯುನಲ್ ಮುಂದೆ ಹೋಗುವ ಅವಕಾಶವನ್ನು ಮಾಡುತ್ತಿದ್ದೇವೆ.

ಶ್ರೀ ನಾಗನಗೌಡ ಪಾಟೀಲ್.— ಈಗ ಅವರು ಕಲ್ಪಿವೇಷನ್ ಮಾಡಿಕೊಂಡು ಬಂದಿದ್ದಾರೆ. ಅವರು ಮತ್ತೆ ಏಕೆ ಹೋಗಬೇಕು ?

ಶ್ರೀ ವಿ. ಎಲ್. ಪಾಟೀಲ್.— ಮದ್ರಾಸ್ ರಾಜ್ಯದಿಂದ ಬಂದಮೇಲೆ ಇನಾಂ ಅಬಾಲಿಷನ್ ಮಾಡಲಾಯಿತು, ಅಲ್ಲಿಂದ ಬಂದಮೇಲೂ ಇನ್ನೂ ಕೆಲವರು ಅಪ್ಲಿಕೇಷನ್ ಹಾಕಿಕೊಂಡಿರುವುದಿಲ್ಲ. ಹಾಗೂ ತಮ್ಮ ಹೆಸರಿಗೆ ಬದಲಾವಣೆ ಮಾಡಿಕೊಂಡಿಲ್ಲ. ಅದಕ್ಕೋಸ್ಕರ ಬದಲಾವಣೆ ಮಾಡಿಕೊಳ್ಳಲು ಆಸ್ಪದ ಕೊಡಲಾಗಿದೆ. ಇನ್ನೂ ರೈತರೂ ಹಾಗೇ ಇದ್ದಾರೆ. ಓನರ್ಸ್ ಸಹಾ ಹಾಗೇ ಇದ್ದಾರೆ. ಓನರ್ಸ್ ಚೇಂಜ್ ಆಗಿರುವುದಿಲ್ಲ. ಇದನ್ನೆಲ್ಲಾ ಮಾಡಬೇಕಾದರೆ, 15 ಪಟ್ಟು ತುಂಬುವುದಕ್ಕೆ ಟೈಂ ಕೊಡುತ್ತಿದ್ದೇವೆ. ಈಗ ಟೈಂ ಕೊಡದೆ ಹೋದರೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ನಾಗನಗೌಡ ಪಾಟೀಲ್.— ತಾವೇ ಕಾಂಪನ್‌ಸೆಷನ್ ಕೊಟ್ಟಿದ್ದು ಈಗ ತಾವೇ ಅಕ್ವೈರ್ ಮಾಡಿದರೆ, ನಾಳೆ ಏನಾದರೂ ಅವರು ಹೈಕೋರ್ಟಿಗೆ ಹೋದರೆ ಅವರು ನಿಮ್ಮ ಮೇಲೆ ಸ್ಟ್ರಕ್‌ಚರ್ಸ್ ಪಾಸ್ ಮಾಡುತ್ತಾರೆ. ನೀವು ಮೊದಲೇ ಕಾಂಪೆನ್‌ಸೇಷನ್ ಕೊಡಲು ಒಪ್ಪಿಕೊಂಡಿದ್ದೀರಿ.

ಶ್ರೀ ವಿ. ಎಲ್. ಪಾಟೀಲ್.— ಮೊದಲ ಕಾನೂನು ಪ್ರಕಾರ ಅವರು ಮಾಲೀಕರಲ್ಲ. ಇವತ್ತು ರೈತರು ಇದ್ದಾರೆ. ಮಾಲೀಕರಿಂದ ಹ್ಯಾಂಡ್ ಮಾತ್ರ ಚೇಂಜ್ ಆಗಿದೆ.

ಶ್ರೀ ನಾಗನಗೌಡ ಪಾಟೀಲ್.— ನಾಳೆ ಅಕ್ವೈರ್ ಮಾಡಬೇಕಾದರೆ ....

ಶ್ರೀ ಎ. ಲಕ್ಷ್ಮೀಸಾಗರ್.— ನಿಮ್ಮ ರೈಟ್ಸ್‌ನ್ನು ಸೇಫ್‌ಗಾರ್ಡ್ ಮಾಡುವುದಕ್ಕೆ ಇದನ್ನು ತಂದಿದ್ದೇವೆ.

ಶ್ರೀ ನಾಗನಗೌಡ ಪಾಟೀಲ್.— ಸೊಮೊಟೋ ಮಾಡಿ ಸ್ವಾಮಿ. ಮತ್ತೆ ಅಪ್ಲಿಕೇಷನ್ ಕೊಟ್ಟು ಕಾಲ್‌ಘಾರ್ ಮಾಡುವುದು ಏಕೆ ಸ್ವಾಮಿ ?

ಶ್ರೀ ವಿ. ಎಲ್. ಪಾಟೀಲ್.— ಇವತ್ತು ಹ್ಯಾಂಡ್ ಚೇಂಜ್ ಆಗಿದೆ ಅಷ್ಟೇ. ಇವತ್ತು ಓನರ್ ಯಾರೋ ಇರುತ್ತಾರೆ. ಇದನ್ನು ಯಾರೋ ಪರ್ಚೇಸ್ ಮಾಡಿರುತ್ತಾರೆ. ಇವನ್ನೆಲ್ಲಾ ಸರಿಪಡಿಸಬೇಕಾಗುತ್ತದೆ.

ಶ್ರೀ ಕೆ. ಚಿನ್ನಬಸವನಗೌಡ.— ಆಂಧ್ರಪ್ರದೇಶದಲ್ಲಿ ಸೊಮೊಟೋ ಮಾಡಬಹುದು ಎಂದು ಕಾನೂನು ಇದೆ. ಆ ಪ್ರಕಾರ ತಹಶೀಲ್ದಾರರೇ ಸೊಮೊಟೋ ಆಕ್ಷನ್ ತೆಗೆದುಕೊಳ್ಳಬಹುದು.

ಶ್ರೀ ವಿ. ಎಲ್. ಪಾಟೀಲ್.— ಆಂಧ್ರದಲ್ಲಿ ಇರುವ ಸಿಚ್ಯುಯೇಷನ್ನೇ ಬೇರೆ ಸ್ವಾಮಿ, ಅಲ್ಲಿನ ಆಕ್ಟ್ ಬೇರೆ ಇದೆ, ಇಲ್ಲಿನ ಆಕ್ಟ್ ಬೇರೆ ಇದೆ. ಇಲ್ಲಿನ ಸಿಚ್ಯುಯೇಷನ್ ಬೇರೆ ಇದೆ, ಇವತ್ತು ಯಾರು ಜಮೀನನ್ನು ಮಾಡುತ್ತಿದ್ದಾರೆ ಅವರು ಅದರ ಓನರ್‌ಷಿಪ್‌ಪಡೆಯಬೇಕಾಗುತ್ತದೆ. ಇನ್ನು ಕೆಲವು ರೈತರು ಇದ್ದಾರೆ. ಆ ರೈತರು ಫಾರ್ಮ್ ತುಂಬಿದರೆ ಅಂಥವರೂ ಮಾಲೀಕರಾಗುವ ಸಲುವಾಗಿ ಟೈಂನ್ನು ಎಕ್ಸ್‌ಟೆಂಡ್ ಮಾಡಿದ್ದೇವೆ. 30ಕ್ಕೆ ಈ ಅವಧಿ ಮುಗಿಯುವುದರಲ್ಲಿ ಇದೆ.

ಡಾ. ವಿ. ಎಸ್. ಆಚಾರ್ಯ.— ಯಾರು ಈಗ ಅಲ್ಲಿ ಭೂಮಿಯನ್ನು ಕೃಷಿಮಾಡುತ್ತಿದ್ದಾರೆ ಅವರು ಮತ್ತೆ ಏಕೆ ಅರ್ಜಿ ಹಾಕಿಕೊಳ್ಳಬೇಕು ?

Sri V. L. PATIL.— It is because technically they are not the owners

ಡಾ. ವಿ. ಎಸ್. ಆಚಾರ್ಯ.— ಹಿಂದೆ, ವಿಭಾಗ ಮಾಡುವುದಕ್ಕೆ, ಮಾರಾಟ ಮಾಡುವುದಕ್ಕೆ ಎಲ್ಲಾ ಹಕ್ಕು ಇದೆ ಎಂದು ಹೇಳಿ ಎನ್‌ಫಾನ್‌ಚೈಸ್ಡ್ ಲ್ಯಾಂಡ್ ಎಂದು ಹೇಳಿದ್ದೀರಿ. ಅವರಿಗೆ ಇರುವ ಹಕ್ಕು ಇದ್ದೇ ಇರುತ್ತದೆ.

ಶ್ರೀ ವಿ. ಎಲ್. ಪಾಟೀಲ್.— ಮೊದಲಿನ ಆಕ್ಟ್ ಪ್ರಕಾರ ಇತ್ತು. ಈಗಿನ ಆಕ್ಟ್ ಪ್ರಕಾರ ಆ ಅಧಿಕಾರ ಇಲ್ಲ. ಅವರು ಮಾಲೀಕರು ಅಲ್ಲ.

ಡಾ. ವಿ. ಎಸ್. ಆಚಾರ್ಯ.— ಸರ್ಕಾರದ ಅಧಿಕಾರಿಗಳ ಅನಾಹುತದಿಂದ ಅವರಿಗೆ ಬಂತು ಆಪತ್ತು. ಯಾರು ಇವತ್ತು ಅದನ್ನು ಅನುಭವ ಮಾಡುತ್ತಿದ್ದಾರೆ ಅವರ ಹೆಸರಿನಲ್ಲಿ ಅದು ಇರಬೇಕಾಗುತ್ತದೆ.

ಶ್ರೀ ಎಲ್. ಗಂಗಾಧರನ್.— 1983ರಲ್ಲಿ ಇನಾಂ ಅಬಾಲಿಷನ್ ಬಂದಿತು. ಇದಕ್ಕೆ ರೀಆರ್ಗನೈಸೆಷನ್ ಆದಮೇಲೆ ಇದು ಬಂದಿದೆ. ಇದನ್ನು ಕ್ಲಾರಿಫೈ ಮಾಡಿ ಪೊಸೆಷನ್ ಕೊಡದಿದ್ದರೆ ಅವರು ಓನರ್ಸ್ ಆಗುವುದಿಲ್ಲವೆಂದು ಇಲ್ಲಿ ಕ್ಲಾರಿಫೈ ಮಾಡುತ್ತಿದ್ದಾರೆ, ಆದ್ದರಿಂದ ಈ ತಿದ್ದುಪಡಿ ತಂದು ಓನರ್‌ಷಿಪ್‌ನ್ನು ಕನ್‌ಫರ್ಮ್ ಮಾಡುತ್ತಿದ್ದಾರೆ.

ಶ್ರೀ ಪಿ. ರಾಮಚಂದ್ರರಾವ್.— ಇನಾಂ ಲ್ಯಾಂಡನ್ನು ಪಡೆದವರು ಏನು ಇದ್ದಾರೆ ಅವರಿಗೆ ಸರಿಪಡಿಸುವುದಕ್ಕೆ ಇದನ್ನು ತಂದಿದ್ದಾರೆ. ಅದರಲ್ಲಿ ತಪ್ಪು ಅಭಿಪ್ರಾಯ ಇಲ್ಲ. ಈ ರೀತಿಯ ತಿದ್ದುಪಡಿಯನ್ನು ತರುವುದರ ಬಗ್ಗೆ ನಾವು ಸ್ವಾಗತ ಮಾಡಬೇಕಾಗುತ್ತದೆ.

ಶ್ರೀ ಎಂ. ಎಸ್. ಪಾಟೀಲ್.— ಮಾನ್ಯ ಅಧ್ಯಕ್ಷರೆ, ಮಾನ್ಯ ಕಂದಾಯ ಮಂತ್ರಿಗಳಿಗೆ ಒಂದು ವಿಷಯವನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಮುಂಬಯಿ ಕರ್ನಾಟಕದಲ್ಲೂ ಕೂಡ ಸ್ವಲ್ಪ ತೊಂದರೆ ಇದೆ. ಮಾನ್ಯ ಡಿ. ಬಿ. ಪವಾರ್ ಅವರು ಅದನ್ನು ಹೇಳಿದರು. ಪಾಟೀಲ್‌ಕೆ ಇನಾಂ ಇದ್ದುದ್ದು ಮಾಡುವುದಕ್ಕೆ ಬರುವುದಿಲ್ಲ. ಸಮಗ್ರವಾಗಿ ಇಡೀ ಕರ್ನಾಟಕ ರಾಜ್ಯಕ್ಕೇ ಅನ್ವಯಿಸುವಂಥ ಒಂದ

2-00 p. m.

ಮಸೂದೆಯನ್ನು ತಂದರೆ ಒಳ್ಳೆಯದಾಗುತ್ತದೆ. ಒಂದೊಂದು ಭಾಗಕ್ಕೆ ಅನ್ವಯಿಸುವಂತೆ ತಂದರೆ ನಮಗೆ ಪ್ರಯೋಜನವಾಗುವುದಿಲ್ಲ. ನಮ್ಮ ಕಡೆ ನೂರಾರು ವರ್ಷಗಳಿಂದ ಜಮೀನು ಮಾರಬೇಕು ಎಂದು ಮನಸ್ಸಿದ್ದರೂ ಕೆಲವೊಂದು ಜನರಿಗೆ ಮಾರುವುದಕ್ಕಾಗದೆ ತೊಂದರೆಯಾಗಿದೆ. ಈಗಾಗಲೇ ಇನಾಂ ಅಬಾಲಿಷನ್ ಆಗಿದೆ. ಆದರೂ ಮಾರುವುದಕ್ಕೆ ಬರುವುದಿಲ್ಲ. ಆ ಬಗ್ಗೆ ಏನು ಹೇಳುತ್ತೀರಿ ?

ಶ್ರೀ ವಿ. ಎಲ್. ಪಾಟೀಲ್.— ಆ ಪ್ರಶ್ನೆ ಬೇರೆ.

ಶ್ರೀ ಎಂ. ಎಸ್. ಪಾಟೀಲ್.— ಬೇರೆ ಪ್ರಶ್ನೆ ಅಲ್ಲ. ಪ್ರತಿಸಾರಿ ಈ ರೀತಿ ಬೆಲೆ ತಂದಾಗಲೂ ಇದು ಬೇರೆ ಪ್ರಶ್ನೆ ಎಂದು ಹೇಳುತ್ತಾರೆ. ಇದರಿಂದ ಎಲ್ಲರಿಗೂ ತೊಂದರೆಯಾಗುತ್ತಿದೆ. ಪ್ರತಿಸಲ ಹೈಕೋರ್ಟಿಗೆ ಕೇಸ್ ಹೋದಾಗ ತಿದ್ದುಪಡಿ ತರುತ್ತಾರೆ. ಆದ್ದರಿಂದ ಇಡೀ ರಾಜ್ಯಕ್ಕೆ ಅನ್ವಯಿಸುವಂತೆ ರೂಪುರೇಷೆಗಳನ್ನು ಮಾಡಿ ಬಿಲ್ ತಂದರೆ ಒಳ್ಳೆಯದು ಎಂದು ಹೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ಇದು ಹಳೇ ಮದ್ರಾಸ್ ಪ್ರಾಂತ್ಯಕ್ಕೆ ಸಂಬಂಧಪಟ್ಟ ವಿಚಾರ. ಇದಕ್ಕೆ ಬೇರೆ ಬೇರೆ ಕಾನೂನುಗಳಿವೆ. ಇದಕ್ಕೆ ಬೇರೆ ಬೇರೆ ತಿದ್ದುಪಡಿಗಳನ್ನು ತರಬೇಕಾಗಿವೆ. ಕೊಳ್ಳೇಗಾಲ ಮತ್ತು ಬಳ್ಳಾರಿ ಪ್ರದೇಶದಲ್ಲಿ ವಿಶೇಷವಾದ ಪರಿಸ್ಥಿತಿ ಇದೆ. ನಮ್ಮ ಕಡೆ ಅದಕ್ಕೆ ಖಿದೀಂ ಟೆನೆಂಟ್ ಎಂದು ಹೇಳುತ್ತಾರೆ. ಅವರಿಗೆ ಎಲ್ಲ ಹಕ್ಕೂ ಕಾನೂನು ದೃಷ್ಟಿಯಲ್ಲಿರುತ್ತದೆ. ಆದರೆ ತಾಂತ್ರಿಕವಾಗಿ ಅವರು ಮಾಲೀಕರಲ್ಲ. ಅದನ್ನು ಕನ್‌ಫರ್ಮ್ ಮಾಡುವುದಕ್ಕೆ ಅವರಿಂದ ರೆಪ್ರಸೆಂಟೇಷನ್‌ಗಳು ಬಂದ ಮೇಲೆ ಇದನ್ನು ಮಾಡಲಾಗಿದೆ.

ಶ್ರೀ ಪಿ. ರಾಮಚಂದ್ರರಾವ್.— ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ತಂದಿದ್ದೀರಿ.

Dr. V. S. Achar.— Sir, in the statement of objects and reasons you have stated :

"The enfranchised inam lands in the old Madras area, viz. Bellary District and Kollegal Taluk of Mysore District were enfranchised (Freed from encumbrance) by the then Government of Madras and they were transferable and heritable..... ....."

That means they had marketable title.

Sri A. Lakshmisagar.— That is true. For all practical purposes, he is the owner, but technically he cannot claim as owner for purpose of transfer.

ಡಾ. ವಿ. ಎಸ್. ಆಚಾರ್ಯ.— Transferable and heritable ಎಂದರೆ ಏನು ಅರ್ಥ 100 ಪರ್ಸೆಂಟ್ ಮಾರ್ಕೆಟಿಬಲ್ ಟೈಟಲ್ ಇದ್ದಹಾಗೆ ಅರ್ಥವಾಗುತ್ತದೆ. Title deeds were also issued ಎಂದು ಇದರಲ್ಲಿದೆ. ಯಾವುದೋ ಕಾನೂನು ಬಂದಿದೆ ಎಂದು ಹಿಂದೆ ಹೋಗುವುದು ಬೇಡ ಈಗ ಪರಿಹಾರ ಕೊಡಬೇಕಾಗುತ್ತದೆ. ಪರಿಹಾರದ ಪ್ರಶ್ನೆ ಇದರಲ್ಲಿದೆ. ಪರಿಹಾರ ಕೊಡುವುದು ಏನೂಇಲ್ಲ, ಬರೀ ಅರ್ಜಿಮಾತ್ರ ಹಾಕುವುದು ಎಂದು ಹೇಳಿದರೆ ....

ಶ್ರೀ ವಿ. ಎಲ್. ಪಾಟೀಲ್.— ಇದರಲ್ಲಿ ಎರಡು ಪ್ರಶ್ನೆ ಇದೆ. 1862ರಲ್ಲಿದ್ದ ಮೊದಲನೇ ಮದ್ರಾಸ್ ಆಕ್ಟ್ ಪ್ರಕಾರ ಮಾಲೀಕರಿಗೆ ಜಮೀನನ್ನು ಮಾರುವಂಥ ಅಧಿಕಾರ ಇತ್ತು. ನಂತರ ಇರಲಿಲ್ಲ. ಇವತ್ತಿನವರೆಗೂ ಇನಾಂ ಆಕ್ಟ್ ಬಂದಮೇಲೆ ಬೇರೆ ಬೇರೆ ಕಡೆ ಮಾರಾಟ ಮಾಡಿದ್ದಾರೆ. ಇನಾಂ ಜಾಗದಲ್ಲಿದ್ದವರಿಗೆ ತೊಂದರೆಯಾಗಿರಲಿಲ್ಲ. ಆ ಜಾಗದಲ್ಲಿಲ್ಲದವರಿಗೆ ಅವರು ಟೆಕ್ನಿಕಲ್ ಓನರ್ ಆಗಿರಲಿಲ್ಲವಾದ್ದರಿಂದ ತೊಂದರೆಯಾಗಿತ್ತು. ಅವರು ರೀಗ್ರಾಂಟ್ ಮಾಡಿಕೊಳ್ಳಬೇಕಾಗುತ್ತದೆ. ಅದಕ್ಕೆ ಟೈಂ ಬಾರ್ ಆಗಿದೆ. ಅವರು ರೀಗ್ರಾಂಟ್ ಮಾಡಿದರೆ ಟೆಕ್ನಿಕಲ್ ಓನರ್ ಆಗುತ್ತಾರೆ. ಇಲ್ಲದೇಹೋದರೆ ಸರ್ಕಾರಕ್ಕೆ ಅದು ಜಮಾ ಆಗಬೇಕಾಗುತ್ತದೆ.

ಡಾ. ವಿ. ಎಸ್. ಆಚಾರ್ಯ.— 1978ರಲ್ಲಿ transferable and heritable ಏನು ಹೋಯಿತು ಆ ಆಕ್ಟನ್ನು ಸರಿಪಡಿಸಿ. ಪುನ: ಕಟ್ಟಬೇಕೆಂದು ಮಾಡಬೇಡಿ.

ಶ್ರೀ ಪಿ. ರಾಮಚಂದ್ರರಾವ್.— ಸರಿಪಡಿಸುವುದಕ್ಕೇ ಇದನ್ನು ತಂದಿದ್ದಾರೆ.

Sri K. Channabasavanagowda.— You have to see the S. R. C. Act. There will be no changes in the ownership right and we come under the S. R. C. Act.

1860ರಲ್ಲಿ ಎನ್‌ಫ್ರಾಂಜೈಸ್ ಆಗಿದೆ. ಎಂದೋ ಇನಾಂ ಅಬಾಲಿಷನ್ ಆಗಿದೆ. ಆದ್ದರಿಂದ ಈ ಬಗ್ಗೆ ಡೆಪ್ಯುಟಿ ಕಮಿಷನರ್‌ಗೆ ಅಪ್ಲೈ ಮಾಡುವುದು ಕೂಡ ಅನಾವಶ್ಯಕವಾಗುತ್ತದೆ. ಆಂಧ್ರದಲ್ಲಿ suo-moto ಮಾಡಿದ್ದಾರೆ.

ಶ್ರೀ ವಿ. ಎಲ್. ಪಾಟೀಲ್.— Suo-moto ಹೇಗಾಗುತ್ತದೆ ?

Sri S. Bangarappa.— The question is that the title holder of that inam land is now made to make this payment. Why should he pay ? This is the question before us.

An Hon'ble Member.— We have already paid it to the Madras Government.

ಶ್ರೀ ಎಸ್. ಬಂಗಾರಪ್ಪ.— ಹಣಕೊಟ್ಟು ಆಗಿಹೋಗಿದೆ ಸಾಹೇಬರೆ. ಲಿಸ್ಟ್ ಇದೆ ಎಷ್ಟೆಷ್ಟು ಹಣ ಕೊಡಬೇಕು ಎಂಬ ಬಗ್ಗೆ. ಹಣ ಕೊಡಬೇಕಾಗಿಲ್ಲ ಎಂದು ನೀವೇ ಸರ್ಕಾರದಿಂದ ತಿದ್ದುಪಡಿ ತನ್ನಿ. ಪಾಸ್ ಮಾಡೋಣ.

ಶ್ರೀ ವಿ. ಎಲ್. ಪಾಟೀಲ್.— ರೀಗ್ರಾಂಟ್ ಮಾಡಿಕೊಳ್ಳುವುದಕ್ಕೆ ಹಣ ಕೊಡಬೇಕಾಗುತ್ತದಲ್ಲ ?

Sri S. Bangarappa.— Since they have already paid to the then Madras Government, it would amount to double payment if they are asked to pay now. What right have you got to levy again for the second time ?

ಶ್ರೀ ವಿ. ಎಲ್. ಪಾಟೀಲ್.— ಮದ್ರಾಸ್ ಗೌರ್ನಮೆಂಟಿಗೆ ಹಣಕೊಟ್ಟು ರೀಗ್ರಾಂಟ್ ಮಾಡಿಕೊಂಡಿಲ್ಲ. ಮಾಡಿಕೊಂಡಿದ್ದರೆ ಇದಕ್ಕೆ ಅವಕಾಶವೇ ಇರಲಿಲ್ಲ.

Dr. V. S. Acharya.— They were free from all encumbrances. They were heritable and transferable.

ಶ್ರೀ ಎ, ಲಕ್ಷ್ಮೀಸಾಗರ್.— ಬೇರೆ ಇನಾಂಗಳಿಗೆ ಇತ್ತು.

ಡಾ. ವಿ. ಎಸ್. ಆಚಾರ್ಯ.— ನಮ್ಮ ಬಳ್ಳಾರಿ ಘಟಕದಿಂದ ಜನತೆಯ ಪರವಾಗಿ ನಮಗೆ ಮನವಿ ಬಂದಿದೆ.

An Hon"ble Member.— There is a register in the Bellary District. We have paid the compensation for the enfranchisation. Some of the lands have been enfranchised and some of them have not been enfranchised.

ಡಾ. ವಿ. ಎಸ್. ಆಚಾರ್ಯ.— ದುಡ್ಡು ಕೊಡುವ ಬಗ್ಗೆ ಇಲ್ಲಿ ವಿವರವಾಗಿ ಹೇಳಿದ್ದೀರಿ, ಎಷ್ಟೆಷ್ಟು ಕೊಡಬೇಕು ಎಂದು ಬರೆದಿದೆ. Why should they pay ? It was transferable and it was heritable earlier.

ಶ್ರೀ ವಿ. ಎಲ್. ಪಾಟೀಲ್.— ಹಣಕೊಟ್ಟು ರೀಗ್ರಾಂಟ್ ಮಾಡಿಕೊಂಡಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.— ಇದರಲ್ಲಿ ಎರಡು ಅಂಶ ಇದೆ. ಕ್ವಿಟ್‌ರೆಂಟ್ ಎಂದು ಒಂದು ಇತ್ತು. ಕೆಲವರು ಇದರಲ್ಲಿ ಕೊಟ್ಟಿದ್ದರೆ ಇನ್ನು ಕೆಲವರು ಕೊಟ್ಟಿಲ್ಲ. ಕೊಟ್ಟಿರುವವರಿಗೆ ಇದು ಅನ್ವಯವಾಗುವುದಿಲ್ಲ. The right may be heritable and transferable but still technically he will not be the owner in the legal language. ನಮ್ಮಲ್ಲಿ ಖಿದೀಂ ಟೆನೆಂಟ್ ಎಂದು ಹೇಳುತ್ತಾರೆ. ನಿಮ್ಮಲ್ಲಿ ಮೂಲಗೇಣಿ ಎಂದು ಹೇಳುತ್ತಾರೆ.

ಶ್ರೀ ಕೆ. ಹೆಚ್. ರಂಗನಾಥ್,— ಖದೀಂ ಟೆನೆನ್ಸಿಗೂ ಮೂಲಗೇಣಿಗೂ ವ್ಯತ್ಯಾಸ ಇದೆ.

ಶ್ರೀ ಎ. ಲಕ್ಷ್ಮೀಸಾಗರ್.— ಒಂದು ನಿಮಿಷ ನಾನು ಹೇಳುತ್ತೇನೆ ಕೇಳಿ. ಏನು ಬೇಕಾದರೂ ಆಮೇಲೆ ಹೇಳಿ.

ಶ್ರೀ ಕೆ. ಹೆಚ್. ರಂಗನಾಥ್,— ಮೂಲಗೇಣಿಗೂ ಖದೀಂ ಟೆನೆನ್ಸಿಗೂ ಅಂತರ ಇದೆ. ಮಾನ್ಯ ಮಂತ್ರಿಗಳು ಅರ್ಥ ಮಾಡಿಕೊಳ್ಳಬೇಕು.

ಪರ್ಟಿಕ್ಯುಲರ್ ಕ್ಯಾಟಗರೈಸೇಷನ್ ಬಗ್ಗೆ ಹೇಳಿದೆ. ನಾನು ತಿಳಿದುಕೊಂಡಿರುವ ಪ್ರಕಾರ, ಅವರ ಮನವಿಗಳು ಬಂದಮೇಲೆ ಅವರ ತೊಂದರೆಯನ್ನು ಬಿಡಿಸಿ ಅವರಿಗೆ ಅನುಕೂಲ ಮಾಡಿಕೊಡಬೇಕೆಂದು ಮೂಲ ಉದ್ದೇಶ. 30ಕ್ಕೆ ಟೈಂ ಆಗುತ್ತದೆ. They are in possession. Their rights are heritable and charitable. But, still they are inamdars. That is the point. By formally making application to the competent authority they will be conferred with rights over the property. ಕ್ವಿಟ್‌ರೆಂಟ್ ಕಾಂಪನ್‌ಸೇಷನ್ ಅಲ್ಲ. ಕೆಲವುಕಡೆ ಕ್ವಿಟ್‌ರೆಂಟ್ ಕೊಟ್ಟಿದ್ದಾರೆ. ಕೆಲವುಕಡೆ ಕೊಟ್ಟಿಲ್ಲ. ಅದನ್ನು ಕ್ಯಾಪಿಟಲೈಸ್ ಮಾಡಿದ್ದಾರೆ. ಅವನು ಪಾವತಿ ಮಾಡುತ್ತಿದ್ದಾನೆ. ಆ ಕಾರಣಕ್ಕೋಸ್ಕರ ಕ್ಯಾಪಿಟಲೈಸೇಷನ್ ಅನ್ನು ಇಟ್ಟುಕೊಂಡಿದ್ದಾರೆ.

ಡಾ. ವಿ. ಎಸ್. ಆಚಾರ್ಯ.— ಭೂಮಿಯ ಬಗ್ಗೆ ವ್ಯಕ್ತಿಗೆ ಮತ್ತು ಭೂಮಿಗೆ ಇರತಕ್ಕ ಸಂಬಂಧ ಏನಿದೆ ಇಲ್ಲಿ ಎರಡು ವಿಷಯಗಳಿವೆ. ಭೂಮಿ ಟ್ರಾನ್ಸ್‌ಫರ್ ಆಗಲಿಕ್ಕೆ ಅಧಿಕಾರ. ನಂತರ ಅವನ ಮಕ್ಕಳಿಗೆ ಹೋಗತಕ್ಕ ಅಧಿಕಾರ. ಈ ಎರಡು ಅಧಿಕಾರಗಳು ಈಗ ಇರುವಾಗ ಇವರು ಎಕ್ಸ್‌ಟ್ರಾ ರೈಟ್ಸ್ ಏನು ಕೊಡುತ್ತಾರೆ ?

ಶ್ರೀ ಎ. ಲಕ್ಷ್ಮೀಸಾಗರ್.— ಅದೇ ರೈಟ್ ಎಂದರೆ still he will be inamdar. He will not have full rights under the law.

ಶ್ರೀ ಪಿ. ರಾಮಚಂದ್ರರಾವ್.— ನಮ್ಮಲ್ಲಿ ಮೂಲಗೇಣಿ ಎಂದು ಇದೆ ಅವನು ಓನರ್ ಅಲ್ಲ. ಅವನಿಗೆ ಟ್ರಾನ್ಸ್‌ಫರ್ ಮಾಡುವ ಹಕ್ಕು ಇದೆ.

ಶ್ರೀ ಎಸ್. ಬಂಗಾರಪ್ಪ.— ಇದರ ಬಗ್ಗೆ ತಾವು ತಮ್ಮ ಗಮನವನ್ನು ಹರಿಸಬೇಕು. ಅವರು ಹೇಳುವುದೇನೆಂದರೆ, ಟ್ರಾನ್ಸ್‌ಫರಬಲ್ ಹೆರಿಟಬಲ್ ಎಂದು ಇದೆ, ಲೀಗಲ್ ಟರ್ಮ್‌ನಲ್ಲಿ ಓನರ್ಸ್ ಎಂದು ಕರೆಯುವುದಕ್ಕೆ ಬರುವುದಿಲ್ಲ. You please apply your mind to this aspect.

Sri A. Lakshmisagar.— Conferring full rights and transferring ownership is sought to be done under this law.

ಶ್ರೀ ಎಸ್. ಬಂಗಾರಪ್ಪ.— ಇನಾಂ ರೈಟ್ಸ್ ಏಂಬುದನ್ನು ಹೇಳಿದಿರಿ. Under the Personal and Miscellaneous Inam abolition Act, 1955, it is 18 years ; of course subject to correction ನಾನು ಉದಾಹರಣೆಗೆ ಹೇಳುತ್ತಿದ್ದೇನೆ. ಅಲ್ಲಿ those who are in possession for 18 years ಎಂದು ಹೇಳಿದ್ದೀರಿ ; Of course subject to correction. ಎಷ್ಟು ವರ್ಷ ಎಂಬುದನ್ನು ಮರೆತಿದ್ದೀರಿ. ಇಲ್ಲಿ ಮೂಲಗೇಣಿ ಎಂಬುದು ; ಒಂದು ಖಿದೀಮ ಗೇಣಿ ಎಂಬುದು ಮತ್ತೊಂದು ; ಇನ್ನೊಂದು ಆರ್ಡಿನರಿ ಟೆನೆನ್ಸಿ. ಹೆರಿಟಬಲ್ ಮತ್ತು ಟ್ರಾನ್ಸ್‌ಫರಬಲ್ ರೈಟ್ಸ್ ಏನಿವೆ ಅವನ್ನು ಓನರ್ ಎಂದು ಕರೆಯುವುದಕ್ಕೆ ಬರುವುದಿಲ್ಲ. ಫುಲ್ ಓನರ್ ಆಗಿ ಮಾಡುವುದಕ್ಕೆ ಪ್ರತ್ಯೇಕವಾಗಿ ಮಾಡಬೇಕಾಗುತ್ತದೆಂಬುದು ನಮ್ಮ ಅಭಿಪ್ರಾಯ. Even those rights which are heritable and transferable under this Act will go along with the inam land at the time of transfer of documents. Thousands of such cases are executed. Actual possession of land is also transferred along with inam rights under the Inam Abolition Act. Therefore, we cannot distinguish between actual rights over the possession and rights in respect of inam lands; that is the position. ಇಲ್ಲಿರತಕ್ಕ ಪ್ರಶ್ನೆಯನ್ನು ಆರ್ಗ್ಯುಮೆಂಟಿಗೋಸ್ಕರ ಇಟ್ಟಿದ್ದಾರೆ. Now, I come to the point. There is only one point here. In Madras, they have already made paymeut as required under that particular law which was in vogue then. ನಾಗನಗೌಡರದ್ದು, ಆಚಾರ್ಯ ಅವರದ್ದು ಮತ್ತು ನಮ್ಮದು ಇರತಕ್ಕ ಆಕ್ಷೇಪಣೆ ಏನೆಂದರೆ, ಹಿಂದಿನ ಮದ್ರಾಸ್ ಸರ್ಕಾರಕ್ಕೆ they have made payment. ಯಾವತ್ತು ಅದನ್ನು ಮಾಡಿದ್ದಾರೆ ? ಎಷ್ಟು ಹಣ ಕೊಟ್ಟಿದ್ದಾರೆ ? ಹಣ ಕೊಟ್ಟಮೇಲೆ ರೈಟ್ಸ್ ಬಂದಿವೆಯೇ ? ಆರ್ಡರ್ ಬಂದಿದೆಯೆ ? ನೀವು ಹೇಳುವುದೇನೆಂದರೆ ಇನಾಂ ಎಂಬುದನ್ನು ತೆಗೆದು ರೈಟ್ಸ್ ಎಂದು ಮಾಡಬೇಕಾಗಿದೆ ; ಅದಕ್ಕೋಸ್ಕರ ಲೀಗಲ್ ಆಗಿ ತರುತ್ತಿವ್ದೇವೆಂದು ಹೇಳುತ್ತಿದ್ದೀರಿ. ಅದನ್ನು

ನಾವು ಒಪ್ಪುವುದಕ್ಕೆ ತಯಾರಿಲ್ಲ. ನಮ್ಮ ಒಂದು ಪರತ್ತು ಏನೆಂದರೆ, ಯಾರು ಹಣ ಕೊಟ್ಟಿದ್ದಾರೆ ....

ಶ್ರೀ ಎ. ಲಕ್ಷ್ಮೀಸಾಗರ್.— ಯಾರು ಹಣ ಕೊಟ್ಟಿದ್ದಾರೆ ಅವರಿಗೆ ಅದು ಅನ್ವಯವಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.— ನೀವು ಒಂದು ಕೆಲಸಮಾಡಿ, ಹಿಂದಿನ ಸರ್ಕಾರಕ್ಕೆ ಯಾರು ಹಣ ತುಂಬಿದ್ದಾರೆ ಅವರಿಂದ ಮತ್ತೆ ಹಣ ತೆಗೆದುಕೊಳ್ಳುವುದಿಲ್ಲ ; ಅವರು ಒಂದು ರೂಪಾಯಿ ಕೊಟ್ಟು ಅರ್ಜಿ ಕೊಟ್ಟರೆ ಅವರಿಗೆ ಪುಲ್ ರೈಟ್ ಕೊಡುತ್ತೇವೆಂದು ಹೇಳಿ. You do that. But, do not demand six times money This is the point. ಯಾರು ಹಣ ಕೊಟ್ಟಿಲ್ಲ ಅವರಿಂದ ವಸೂಲ್ಮಾಡಿ. ಆದರ ಬಗ್ಗೆ ನಮ್ಮ ಭಿನ್ನಾಭಿಪ್ರಾಯ ಏನೂ ಇಲ್ಲ.

ಶ್ರೀ ಜೆ. ಹೆಚ್. ಪಟೇಲ್.— ಮದ್ರಾಸ್ ಸರ್ಕಾರದ ಪ್ರಕಾರ ....

ಶ್ರೀ ಎಸ್. ಬಂಗಾರಪ್ಪ.— ಅವರು ತಲೆ ಬೋಳಿಸಿದರು ಎಂದರೆ ನೀವೂ ಬೋಳಿಸುತ್ತೀರಾ ?

ಶ್ರೀ ಕೆ. ಹೆಚ್. ರಂಗನಾಥ್.— ಇದರ ಉದ್ದೇಶ ಏನು, ಹೇಗೆ, ಯಾವುದು ಎಂಬುದನ್ನು ಮಂತ್ರಿಗಳು ಸ್ಪಷ್ಟವಾಗಿ ಹೇಳಲಿ. ಏತಕ್ಕೆಂದರೆ ಬಿಲ್ ಪಾಸ್ ಮಾಡುವುದು ಎಂದರೆ ಮಂತ್ರಿಗಳು ಏನು ಹೇಳುತ್ತಾರೆಂಬುದನ್ನು ಕೇಳಿ ಮಾಡಬೇಕೇ ಹೊರತು ಸುಮ್ಮನೆ ಮಾಡುವುದಕ್ಕಾಗುವುದಿಲ್ಲ. ನಮ್ಮಲ್ಲಿ ಒಂದು ಅನುಮಾನ ಏನು ಬಂದಿದೆ ಎಂದರೆ, ಈಗಾಗಲೇ ಹಣ ಕೊಡಲಾಗಿದೆ ; ಪುನಃ ಅವರು ಅರ್ಜಿ ಕೊಡಬೇಕು ಮತ್ತು ರಿಜಿಸ್ಟರ್ ಆದಮೇಲೆ ಮತ್ತೆ ಹಣಕೊಡಬೇಕೆಂದು ಅದರಲ್ಲಿ ಪ್ರಸ್ತಾಪ ಮಾಡಿದ್ದಾರೆ. ಈಗಾಗಲೇ ಹಣ ಕೊಡಲಾಗಿದೆ ಅಂದರೂ ಎರಡನೇ ಸಾರಿ ಏತಕ್ಕೆ ಕೊಡಬೇಕೆಂದು ಗೊತ್ತಾಗುತ್ತಿಲ್ಲ. ಹಣ ಕೊಟ್ಟು ಕ್ಲಿಯರ್ ಮಾಡಿಕೊಂಡ ಮೇಲೆ ಸರ್ಕಾರದವರು ಕಾಂಪನ್ಸೇಷನ್ ಕೊಟ್ಟಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ಮಾಡಿದರೆ ದುಡ್ಡುಕೊಟ್ಟು ಆಕ್ಯುಪೆನ್ಸಿ ರೈಟ್ ತೆಗೆದುಕೊಳ್ಳುವುದು ಏತಕ್ಕೆ ಎಂದು ಆಗಿದೆ. ಇದರ ಬಗ್ಗೆ ಇರತಕ್ಕ ಆಕ್ಟ್‌ನಲ್ಲಿ ಸ್ಪಷ್ಟತೆ ಇಲ್ಲ. ಮಂತ್ರಿಗಳು ಈ ಕಲಂನಲ್ಲಿ ಹೇಗಾಗುತ್ತದೆ ಎಂಬುದನ್ನು ವಿವರಿಸಿದ ಮೇಲೆ ಒಪ್ಪಿಕೊಳ್ಳುವುದಾದರೆ ಒಪ್ಪಿಕೊಳ್ಳೋಣ.

ಶ್ರೀ ಜೆ. ಹೆಚ್. ಪಟೇಲ್.— ನಾವು ಹೇಳಿದಾಗ ನೀವು ಇರಲಿಲ್ಲವೆಂದು ಕಾಣುತ್ತದೆ. ಇಲ್ಲಿ ಮುಖ್ಯವಾಗಿ ಎರಡು ಉದ್ದೇಶಗಳಿವೆ. ಮದ್ರಾಸ್ ಆಕ್ಟ್ ಪ್ರಕಾರ ಒಬ್ಬರಿಂದ ಇನ್ನೊಬ್ಬರಿಗೆ ಆಕ್ಯುಪೆನ್ಸಿ ರೈಟ್ ಅನ್ನು ಬದಲಾವಣೆ ಮಾಡತಕ್ಕ ಅವಕಾಶ ಉಂಟು. ಎಷ್ಟೋ ನಡವಳಿಕೆಗಳು ನೂರು ವರ್ಷಗಳಿಂದ ಬದಲಾವಣೆ ಆಗಿವೆ. ಯಾರು ಜಮೀನು ಸಾಗು ಮಾಡುತ್ತಿದ್ದಾರೆ ಅವರು ಟೆಕ್ನಿಕಲ್ ಆಗಿ ಮಾಲೀಕರಾಗಿದ್ದರೂ ಮಾಲೀಕರಾಗುವುದಿಲ್ಲ. ಆದುವರಿಂದ ಅವರನ್ನು ಮಾಲೀಕರನ್ನಾಗಿ ಮಾಡಬೇಕು, ಒಂದು ವೇಳೆ ಆ ಜಮೀನಿನಲ್ಲಿ ಬೇರೆ ಯಾರಾದರೂ ರೈತರು ಇದ್ದರೆ ಆ ರೈತರಿಗೆ ಕ್ಲೈಂ ಮಾಡುವ ಸಲುವಾಗಿ ಅಧಿಕಾರ ಕೊಡಬೇಕು ಮತ್ತು ಟೈಂ ಕೊಡಬೇಕು. ಅಷ್ಟೇ ಹೊರತು ಮತ್ತೇನು ಇಲ್ಲ.

ಶ್ರೀ ಎಸ್. ಬಂಗಾರಪ್ಪ.— ನಾವು ಕೇಳುವುದೇ ಬೇರೆ, ನೀವು ಉತ್ತರಿಸುವುದೇ ಬೇರೆ. ಮುಖ್ಯ ಅಂಶವನ್ನು ಬಿಟ್ಟು ಬೇರೆ ಎರಡು ಅಂಶಗಳನ್ನು ಟಚ್ ಮಾಡುತ್ತಿದ್ದೀರಿ. ಒಬ್ಬ ಇನಾಂದಾರ ಜಮೀನು ತೆಗೆದುಕೊಂಡಮೆಲೆ ಅದು ಟ್ರಾನ್ಸ್‌ಫರ್ ಆಗಿ ಹೊರಟುಹೋಗಿರಬಹುದು ಅಥವಾ ಬೇರೆಯವರ ಸ್ವಾಧೀನದಲ್ಲಿರಬಹುದು. ಯಾರ ಸ್ವಾಧೀನದಲ್ಲಿದ್ದರೂ ಅವರಿಗೆ ಆದರ ಹಕ್ಕನ್ನು ಕನ್‌ಫರ್ಮ್ ಮಾಡುವುದಕ್ಕೆ ಈ ತಿದ್ದುಪಡಿ ಮಸೂದೆಯನ್ನು ತಂದಿದ್ದೀರಿ ಎಂಬುದನ್ನು ಒಪ್ಪುತ್ತೇನೆ. ಹಿಂದೆ ಯಾರು ಆದನ್ನು ಮಾರಾಟ ಮಾಡಿದ್ದಾರೆ ಅವರು ಹಳೇ ಮದ್ರಾಸ್ ಸರ್ಕಾರಕ್ಕೆ ಹಣ ಕಟ್ಟಿದ್ದಾರೆ. ಹಣ ಕಟ್ಟಿದ ಮೇಲೆ ಅವರಿಗೆ ರೈಟ್ ಬಂದಿದೆ. ಆಮೇಲೆ ಟ್ರಾನ್ಸ್‌ಫರ್ ಮಾಡಿದ್ದಾರೆ. ನೀವು ಅವರಿಂದ ಹಣ ವಸೂಲ್ಮಾಡುವುದಕ್ಕೆ ಹಕ್ಕು ಇಲ್ಲ Supposing the original owner had not paid to the then Madras Government. ಹಣ ಕೊಡದೆ ಇದ್ದರೆ you could have ascertained the present position. ನೀವು ಏನು ಫಿಕ್ಸ್ ಮಾಡುತ್ತೀರಿ ಆದನ್ನು ಮಾಡಬಹುದಾಗಿತ್ತು. ಯಾರು ಹೆರಿಟೆಬಲ್ ಆಗಿ ಬಂದಿದ್ದಾರೆ payment was made by the original seller. ಅವರ ಹತ್ತಿರ ವಸೂಲ್ಮಾಡುವುದಕ್ಕೆ ಬರುವುದಿಲ್ಲ.

That is why, I suggested a via-media. Please bring an official amendment to this present Bill.

Sri A. Lakshmisagar.— There is different between the quit rent and the assessment. Quite rent is lesser than the assessment. This

Bill is intended to collect the difference between the quit rent and the real assessment. That is the intension of this Bill. I will quote from the Statement of Objects and Reasons :

"The enfranchised inam lands in the Old Madras area, viz., Bellary District and Kollegal Taluk of Mysore District were enfranchised (Freed from encumbrance) by the then Government of Madras and they were transferable and heritable. Inam title deeds were also issued.

It was represented to Government that in view of the above, the enfranchised inams should not be treated on par with other inams with regard to registration of occupancy rights and restrictions on transfer. With a view to remove the hardship caused to the holders of theee enfranchised inam lands, it is considered necessary to simplify and modify the procedure for registration of occupancy rights of these inamdars (other than tenants) and to relax the restrictions on alienations of such lands by them by amending the provisions of the Karnataka Certain Inams Abolition Act, 1977".

But still in thc eyes of the law they are not the owners of the land. The time for this purpose expires very shortly. It is to enable this Inamdar or whoever he is, who is in possession, to apply to the Tahsildar and get himself registered. this amendment has been brought,

Sri S. Bangarappa.— I am not disputing your intention. But my point is that only to help the Inamdar.....

Sri A. Lakshmisagar.— Regarding rent, I would only submit this. The quit rent that was being paid, was capitalised. Even then the quit rent was less than the actual assessment of the land. Now that difference between the quit rent and the actual assessment is sought to be collected to the point of five years only from the date of the application.

ಶ್ರೀ ಎಸ್. ಬಂಗಾರಪ್ಪ.— ನನಗೆ ತಿಳಿದಿರುವ ಹಾಗೆ ಇದರಲ್ಲಿ ಬರುವುದಿಲ್ಲ. ಕ್ವಿಟ್ ರೆಂಟ್ ಕೊಡಬೇಕೆಂದು ಹೇಗೆ ಬರುತ್ತದೆ ?

ಶ್ರೀ ಕೆ. ಹೆಚ್. ರಂಗನಾಥ್.— ಹಳೇ ಮೈಸೂರಿನಲ್ಲಿ ಮಾತ್ರ ಕ್ವಿಟ್ ರೆಂಟ್ ಇದ್ದುದು. ಬಳ್ಳಾರಿಯಲ್ಲಿ ಇನಾಮ್ಸ್ ಇಲ್ಲ, ಅದು ಜೋಡಿ ದೇವಾದಾಯ ; ಡಿಫರೆಂಟ್ ಕ್ಯಾಟಗರೀಸ್ ಬರುತ್ತವೆ. ಇದು ಸರ್ವೀಸ್ ಇನಾಮ್ಸ್.

ಉಪಾಧ್ಯಕ್ಷರು.— ನಮ್ಮ ಮುಂದೆ ಎರಡು ಬಿಲ್ಲುಗಳು ಇವೆ. ಅದರಲ್ಲಿ ಸರಟನ್ ಇನಾಂ ಅಬಾಲಿಷನ್ ಆಕ್ಟ್ ಒಂದು ಇದೆ. ಇನ್ನೊಂದು ವಿಲೇಜ್ ಆಫೀಸರ್ಸ್ ಎಂದು ಮತ್ತೊಂದು ಇದೆ.

ಶ್ರೀ ಎಸ್. ಬಂಗಾರಪ್ಪ.— ಸ್ಟೇಟ್‌ಮೆಂಟ್ ಆಫ್ ಅಬ್ಜೆಕ್ಟ್ಸ್ ಅಂಡ್ ರೀಜನ್ಸ್‌ನಲ್ಲಿ ಏನು ಇದೆ ಅದನ್ನು ಸಾಗರ್‌ರವರು ತಿಳಿದುಕೊಳ್ಳಬೇಕು. ಆಗ ಮಾತ್ರ ನಿಮ್ಮ ಆರ್ಗ್ಯುಮೆಂಟ್ ಅರ್ಥಮಾಡಿಕೊಳ್ಳಲಿಕ್ಕೆ ಅನುಕೂಲವಾಗುತ್ತದೆ. ಹಳೆಯ ಮದ್ರಾಸಿನಲ್ಲಿರತಕ್ಕ ಕೊಳ್ಳೇಗಾಲ ತಾಲ್ಲೂಕು, ಬಳ್ಳಾರಿ ತಾಲ್ಲೂಕುಗಳಿಗೆ ಸೀಮಿತಗೊಳಿಸಿ ಸ್ಟೇಟ್ ರೀ ಹೆಬಿಲಿಟೇಷನ್ ಆಕ್ಟ್‌ನಲ್ಲಿ ಏನು ಹೇಳಿದ್ದಾರೆ, ರೈಟ್ಸ್ ಅಂಡ್ ಲಯಾಬಿಲಿಟೀಸ್ ಏನಿತ್ತು, ಆಗಿರುವ ಕಾನೂನು ಪ್ರಕಾರ ಅದನ್ನು ಮಾನ್ಯತೆ ಮಾಡುತ್ತೇವೆಂದು 1956 ನೇ ರಾಜ್ಯ ಪುನರ್ವಿಂಗಡಣಾ ಕಾನೂನು ಪ್ರಕಾರ ಸ್ಪಷ್ಟವಾಗಿ ಹೇಳಿದ್ದಾರೆ. ಆಗಿದ್ದಂಥ ಮದ್ರಾಸ್ ಸ್ಟೇಟ್ ಆಕ್ಟ್ ಪ್ರಕಾರ ಅದು ಕ್ವಿಟ್ ರೆಂಟ್ ಲ್ಯಾಂಡ್ ಅಸೆಸ್‌ಮೆಂಟಿಗಿಂತಲೂ ಕಡಿಮೆ ಇದೆ.

Sri A. Lakshmisagar.-- Regarding payment of rent, please go through Clause 12 :

"Payment of premium' etc- (1) The right of an inamdar or other person to be registered as an occupant under this Act shall be subject to the payment by him to the State Government of a premium as specified below :—

(i) an inamdar ; six times the land revenue of the lands to be registered ;

(ii) other persons referred to in section 5 : one hundred times the land revenue of the lands to be registered".

All these laws are already there. The only fresh point is that the time for application expires by 30th. We are only extending the time to file the application. In the annexure it is already there,

Sri S. Bangarappa.-- We are not disputing your intention at all. Tc get the occupancy rights/registered, he has to make the payment under the Inam Abolition Act.

Sri A. Lakshmisagar.— It is already there.

Sri S. Bangarappa -- I agree. But the point here is that we have already made the payment.

ಶ್ರೀ ಎ. ಲಕ್ಷ್ಮೀಸಾಗರ್.— ಡಿಪರೆನ್ಸ್ ಆಗಲೇ ಹೇಳಿದ್ದೇನೆ. ಹಿಂದೆ ಅವರು ಕೊಡುತ್ತಾ ಇದ್ದುದಕ್ಕೂ ಅಸೆಸ್‌ಮೆಂಟಿಗೂ ವ್ಯತ್ಯಾಸ ಇದೆ. ಆ ವ್ಯತ್ಯಾಸ ತೆಗೆದುಕೊಳ್ಳಬೇಕು.

ಶ್ರೀ ಕೆ. ಹೆಚ್. ರಂಗನಾಥ್.-- ಅವಸರ ಮಾಡುವುದು ಬೇಡ.

ಶ್ರೀ ಎ. ಲಕ್ಷ್ಮೀಸಾಗರ್.-- ಅವಸರ ಇಲ್ಲ.

ಶ್ರೀ ಕೆ. ಹೆಚ್. ರಂಗನಾಥ್.-- ಸರ್ಕಾರ ಸದುದ್ದೇಶದಿಂದ ಇರಬೇಕು ಡಿಸೆಂಬರ್ 27ರಲ್ಲಿ ಹಿಂದೂ ಪತ್ರಿಕೆಯಲ್ಲಿ ಇದರ ಬಗ್ಗೆ ಒಂದು ಪ್ರಸ್ತಾಪವಾಗಿದೆ. ಮಾನ್ಯ ಮಂತ್ರಿಗಳು ಅದನ್ನು ತರಿಸಿ ಕೊಂಡು ಓದಿದರೆ ಒಳ್ಳೆಯದು. ಅಲ್ಲಿ ಒಂದು ಮಾತನ್ನು ಹೇಳುತ್ತಾ ಈ ರೀತಿ ಬರೆಯುತ್ತಾರೆ.

I quote from the Hindu Newspaper, dated 28-12-1983.

"The ryots had pleaded that the hereditary inam lands had been given to certain farmers by the British over two centuries ago and earlier by the Nizam's Government in Bellary district (Royalseema region) and in South Canara of the farmer Madras Presidency, Farmlands ranging from four to 400 hectares, thus gifted awaw, were cultivated with paddy and sugarcane (irrigated crops) and cotton, wheat, and jowar (rain fed crops) Water and betterment levies were also paid to the Government by the farmers. Parts of such lands acquired for digging irrigational canals or laying of roads under the Land Acquisition Act, were paid for. The lands were "enfranchised" on October 31, 1881 in favour of inamdars by the Madras Government. Mr. A. A. Venkataraman, Land Acquisition Officer, Bellary "enfranchised" village service Inam lands during 'Resettlement, on February 1, 1925 and compensated for parts of land acquired for the Tungabhadra roads and canals.

Under the circumstances, many inamdars of Bellary failed to file Form 1 under the Karnataka Inams Abolition Act under the impression that having been conferred withholding rights, they need not respond. Further, form I required the farmers to sign a declaration that "he has been cultivating lands as tenant /inam subtenant rendering service in the institution of religious worship for years", which none of the Inamdars in Bellary has been doing and hence presumed It was unaltered to their status.

The farmers became aware of their involvement under the Karnataka Land Grant Act 1969 and the Revenue Act 1964 the Inam lands in respect of which no applications in Form I were filed were sought to be distributed to landless persons." ಮತ್ತೆ ತೊಂದರೆಗಳನ್ನು ಕೊಡುತ್ತೀರಾ ?

2-30 p.m,

It gives room for confusion. The intention is not mentioned clear here I request the Government to reconsider Section-II of the Bill.

Mr. Deputy Speaker.—I will now put the consideration motion to the vote of the House. The question is :

"That the Karnataka certain Inams Abolition (Amendment) Bill, 1984 be taken into consideration."

The Motion was adopted

Clause by Clause Considera ion

Mr. Deputy Speaker.—I will now put clause-2 to the vote of the House. The question is :

"That Clause-2 do stand part of the Bill"

The Motion was adopted

Clause-2 was added to the Bill

Clause-3

Mr. Deputy Speaker.—There is an amendment to Clause-3 moved by the Hon. Member Sri H. Nagan Gowda.

Sri H. Nagan Gowda.—Sir, I beg to move—

"That in Clause-3, for the proposed provision, the following provision shall be inserted—

"Provided that where the inam is an enfranchised inam, such application by the inamdar including holder of a minor inam shall be made to the Deputy Commissioner. The application shall be decided suo-moto by the Tahsildar in issuing individual notices to the concerned inamdars."

Mr. Deputy Speaker.—The question is :

"That in clause-3, for the proposed provision, the following provision shall be inserted—

"Provided that where the inam is an enfranchised inam, such application by the inamdar including holder of a minor inam shall be made to the Deputy Commissioner. The application shell be decided suo-moto by the Tahsildar in issuing individual notices to the concerned inamdars.',

The motion was adopted

Mr. Deputy Speaker.—There is an official amendment to Clause-3. I request the Hon. Minister to move the amendment.

Sri A. Lakshmi Sagar (Minister for Law and Parliamentary Affairs).—Sir, on behalf of the Hon. Minister for Revenue, I beg to move—

"That in Clause-3, after the words 'made to the Deputy Commissioner', the words **'on or before 31st day of December'** shall be inserted."

Mr. Deputy Speaker.—The question is :

"That in Clause-3, after the words 'made to the Deputy Commissioner', the words **'on or before 31st day of December'** shall be inserted.

The Motion was adopted

Clause-3 as amended was added to the Bill.

Clauses 3 and 4

Mr. Deputy Speaker.—Since there are no amendments to Clauses 4 and 5, I will put them to the vote of the House.

The question is :

"That Clauses 4 and 5 do stand part of the Bill,'

The Motion was adopted

Clauses 4 and 5 were added to the Bill

Clause 1 Etc.

Mr. Deputy Speaker.—The question is :

"That Clause-1, the Long Title, the Preamble and the Enacting Formula do stand part of the Bill,"

The Motion was adopted

Clause-1, the Long Title, the Preamble and the Enacting Formula were added to the Bill

Motion to Pass

Sri A. Lakshmi Sagar (Minister for Law and Parliamentary Affairs).—Sir, on behalf of the Hon. Minister for Revenue beg to move :

"That the Karnataka Certain Inams Abolition (Amendment) Bill, 1984 as amended be passed."

Mr. Deputy Speaker.—The question is :